
# ಪುಂಗವ

ರಾಷ್ಟ್ರೀಯ ಜಾಗರಣ ಪತ್ರಿಕೆ



ಸಂಪುಟ : 37 ಸಂಚಿಕೆ : 1 ಮನ್ಮಥ–ಕರ್ಕಾಟಕ ಕಲಿಯುಗಾಬ್ದ 5117 15–8–2015 ತ್ರೈವಾರ್ಷಿಕ : ರೂ. 150.00 ಬಿಡಿ ಪ್ರತಿ : ರೂ. 3.00 ಪುಟಗಳು : 4


# ಭ್ರಾತೃತ್ವದಾಚೆಗೂ ಬೆಳೆಯಲಿ ರಕ್ಷೆಯ ಕಕ್ಷೆ

ಮೊನ್ನೆ ಸ್ನೇಹಿತರ ದಿನದ ಸಮೂಹ ಸನ್ನಿ ಅನೇಕ ಕಡೆ ವ್ಯಾಪಿಸಿತ್ತು. ದುರ್ದೈವವೆಂದರೆ ಕಾರ್ಗಿಲ್ ವಿಜಯ ದಿವಸವನ್ನು ಬದಿಗೊತ್ತಿ ಭಾರತದ ಕೆಲ ಮಾಧ್ಯಮಗಳು ಸ್ನೇಹಿತರ ದಿನದ ಬಗ್ಗೆ ವರದಿ, ಲೇಖನ, ಕಾರ್ಯಕ್ರಮ ನಡೆಸಿಕೊಟ್ಟು ತಮ್ಮ ದರಿದ್ರತನ ಹರಾಜಿಗಿಟ್ಟವು. ಗ್ರೀಟಿಂಗ್ಸ್, ಬ್ಯಾಂಡುಗಳ ವಹಿವಾಟಿನ ಅನಗತ್ಯ ಉತ್ಪ್ರೇಕ್ಷೆಯ ಲೆಕ್ಕಕೊಟ್ಟು ಧನ್ಯವಾದವು. ವಾರಕ್ಕಿಂತ ಮೊದಲೇ ತಾನೇ ಒಂದು ಟ್ರೆಂಡು ಹುಟ್ಟು ಹಾಕಿ ಪೋಷಿಸಿದ ಭಾರತದ ಮಾಧ್ಯಮಲೋಕ ಸ್ನೇಹಿತರೊಳಗೆ ಅಡಗಿದ್ದ ಸ್ನೇಹವನ್ನು ಬಡಿದೆಬ್ಬಿಸಿದಂತೆ ಹೇಷಾರವ ಮಾಡುತ್ತಿತ್ತು. ಪಾಪ ಅದಕ್ಕೇನು ಗೊತ್ತು ತಾನು ಸಮುದ್ರದಿಂದ ಬಿಂದಿಗೆ ನೀರು ಹೊರತೆಗೆದು ಬೀಗುತ್ತಿದ್ದೇನೆ, ಅಸಲಿಗೆ ಯಾವ ಹೆಚ್ಚುಗಾರಿಕೆಯೂ ತನಗಿಲ್ಲ ಎಂಬುದಾಗಿ!

ತುಂಬಿ ಹರಿಯುತ್ತಿರುವ ಸರಯೂ ನದಿ, ಕಣ್ಣಲ್ಲಿ ನೀರು ತುಂಬಿಕೊಂಡು ವಿಧಿಗೆ ಹಿಡಿಶಾಪ ಹಾಕುತ್ತಾ ಮರಳಿ ಅಯೋಧ್ಯೆಗೆ ಹೆಜ್ಜೆ ಪೋಣಿಸುತ್ತಿರುವ ಪುರಜನರು, ವಿಹ್ವಲಗೊಂಡು ರಥದ ವಾಘೆಗಳನ್ನು ಚಪ್ಪರಿಸುತ್ತ ಒಳಗೊಳಗೆ ಕುಸಿಯುತ್ತಿದ್ದ ದಶರಥನ ಮಂತ್ರಿ ಸುಮಂತ, ಹೀಗೆ ರಾಮಾಯಣದ ಘಟನಾವಳಿಗಳು ಆಗೀಗಲೊಮ್ಮೆ ಕಣ್ಣ ಮುಂದೆ ಸುಳಿಯುತ್ತವೆ. ಹಾಗೆ ಎಲ್ಲವನ್ನೂ ಕಳೆದುಕೊಂಡು ಸರಯೂವಿನ ತರಂಗಗಳನ್ನು ದಿಟ್ಟಿಸಿ ದಿಗಿಲಾಗಿದ್ದ ರಾಮನನ್ನು ಹಿಡಿದೆತ್ತಿ ಆಧರಿಸಿದ ರಾಮಾಯಣದ ಪಾತ್ರವೊಂದಿದ್ದರೆ ಅದು ಬೇಡರಾಜನಾದ ಗುಹನದ್ದು ಮಾತ್ರ. ಗುಹ ರಾಮರ ಆಲಿಂಗನದ ಕತೆ ಅನುರಣನಗೊಂಡಾಗಲೆಲ್ಲ ಮೈಯ ರೋಮಗಳು ಕಂಪಿಸುತ್ತವೆ. ರೋಮಾಂಚನ ನರನಾಡಿಗಳಲ್ಲಿ ಪ್ರವಹಿಸಿ ಪುಳಕ ಪ್ರೇರಣೆಗಳು ಮೈದಳೆದು ನಿಲ್ಲುತ್ತವೆ. ನಮ್ಮ ನಾಡಿನ ಅಗಣಿತ ಪರಂಪರೆಗಳನ್ನು ಬಿಟ್ಟು ಪಾಶ್ಚಾತ್ಯರ ಆಚರಣೆಗಳ ಹಿಂದೆ ಬೀಳುತ್ತಿರುವ ನಮಗೆಂತಹ ಆತ್ಮವಿಸ್ಮೃತಿ ಬಡಿದಪ್ಪಳಿಸಿದೆ?

ವರ್ಷಪೂರ್ತಿ ಇರುವ ದಿನಗಳೆಲ್ಲ ಖಾಲಿ ಹೊಡೆಯುತ್ತಿದೆ ಎಂದುಕೊಂಡು ಅಪ್ಪಂದಿರ ದಿನ, ಅಜ್ಜಿಯಂದಿರ ದಿನ, ಅಜ್ಜನ ದಿನ, ಎಂದೆಲ್ಲ ನಾಮಕರಣ ಶುರುವಿಟ್ಟು ಬ್ಯಾಂಡು ಬಜಾಯಿಸುತ್ತಿರುವ ನಾವು ಒಳಗೊಳಗೆ ಪ್ರಪಾತಕ್ಕೆ ಕುಸಿಯುತ್ತಿದ್ದೇವೆ ಎನಿಸುತ್ತಿಲ್ಲವೇ? ದಿನೇ ದಿನೇ ಒಂದೆಡೆ ವಿಚ್ಛೇದನಗಳು ಗಣನೀಯ ಪ್ರಮಾಣದಲ್ಲಿ ಏರುತ್ತಿವೆ. ತಂದೆತಾಯಿಯರನ್ನು ಹಳ್ಳಿಯಲ್ಲಿ ಬಿಟ್ಟು ನಗರದಲ್ಲಿ ಹೆಂಡತಿ ಮಗುವಿನೊಂದಿಗೆ ಸುಖವಾಗಿ ಕಾಲ ಕಳೆಯುವ ವರಸೆಗಳು ಎಲ್ಲ ಕುಟುಂಬಕ್ಕೆ ಸಾಂಕ್ರಾಮಿಕ ರೋಗದಂತೆ ತಗಲುತ್ತಿವೆ. ಕೂಡುಕುಟುಂಬದಿಂದ ವಿಭಕ್ತಕುಟುಂಬದೆಡೆಗಿನ ದೌಡು ದಿಗಿಲು ಹುಟ್ಟಿಸುತ್ತಿದೆ. ಇನ್ನು ದನಕರು, ಕೃಷಿಯ ಮಾತು ಒತ್ತಟ್ಟಿಗಿರಲಿ. ಮುಂದೊಂದು ದಿನ ವಿಶ್ವ ಕೌಟುಂಬಿಕ ದಿನ ಜನ್ಮ ತಳೆದರೂ ಆಶ್ಚರ್ಯವಿಲ್ಲ. ಯಾಕೆಂದರೆ ಹಳೆಯ ಕಾಲದಂತೆ ಸತ್ಯನಾರಾಯಣ ಪೂಜೆಗೋ, ಗೃಹಪ್ರವೇಶಕ್ಕೋ, ಇಲ್ಲ ಮದುವೆ ಮುಂಜಿಗೋ ದಾಯಾದಿಗಳ ಮನೆಗೆ ಕುಟುಂಬ ಸಮೇತರಾಗಿ ಹೋಗಲು ನಮಗೆ ಪುರುಸೊತ್ತಿಲ್ಲವಲ್ಲ?

ಯಾವುದೇ ಒಂದು ಸಮಾಜ ಅಥವಾ ನಾಗರಿಕತೆ ಬಾಹ್ಯ ಆಕ್ರಮಣವನ್ನು ದಿಟ್ಟವಾಗಿ ಎದುರಿಸಬೇಕೆಂದರೆ ಆಂತರಿಕವಾಗಿ ಸದೃಢವಾಗಿರಬೇಕು. ವ್ಯಕ್ತಿಯಿಂದ ಕುಟುಂಬದ ನಿರ್ಮಾಣ, ಕುಟುಂಬದ ಭೂಮಿಕೆಯಡಿ ಸಮಾಜ, ಸಮಾಜದ ಸಶಕ್ತತೆಯಿಂದ ರಾಷ್ಟ್ರ ಎಂಬ ನಿಲುವಿಗೆ ಭಾರತೀಯ ಸನಾತನ ಪರಂಪರೆ ಹೇಳಿ ಮಾಡಿಸಿದಂತಿತ್ತು. ಆದರಿಂದು ನಾವು ಸಂಬಂಧಗಳಿಂದ ಹೊರಗಡೆ ದೌಡಾಯಿಸುತ್ತಿರುವುದನ್ನು ನೋಡಿದರೆ ನಿರ್ಮಾಣದ ಬದಲಾಗಿ ನಿರ್ನಾಮದ ಚಹರೆಗಳೇ ಕಣ್ಣಿಗೆ ಕಾಣುತ್ತಿವೆ.

ಹಿಂದೂ ಸಂಸ್ಕೃತಿಯ ಹಬ್ಬಗಳ ಹಿರಿಮೆಗಳನ್ನೊಮ್ಮೆ ಜ್ಞಾಪಿಸಿಕೊಂಡರೆ ನಮ್ಮ ಬಗೆಗೇ ಅತೀವ ಹೆಮ್ಮೆಯಾಗುತ್ತದೆ. ವ್ಯಕ್ತಿಕೇಂದ್ರಿತವಾದ ಆಚರಣೆಗಳೇನಾದರೂ ನಮ್ಮಲ್ಲಿವೆಯೇ? ಎಲ್ಲವೂ ಸಮಷ್ಟಿಕೇಂದ್ರಿತವಾಗಿರುವ, ಜಗತ್ತಿಗೇ ಒಳ್ಳೆಯದನ್ನು ಬಯಸುವ ಆಶಯಗಳುಳ್ಳವು. ಅದರಲ್ಲೂ ರಕ್ಷಾಬಂಧನದಂತಹ ಹಬ್ಬ ಭ್ರಾತೃತ್ವದ ಬೆಸುಗೆಯನ್ನು ನಮ್ಮಲ್ಲಿ ಭದ್ರವಾಗಿಯೇ ಬೆಸೆಯುತ್ತದೆ. ಸಮರ ಸನ್ನಾಹ, ದಾಸ್ಯ ವಿಮೋಚನೆಯ ಗರ್ಜನೆ, ಪರಕೀಯರ ವಿರುದ್ಧ ಸಿಡಿಗುಂಡಾಗುವ



ನಿಟ್ಟಿನಲ್ಲಿ ಈ ಹಬ್ಬದ ಪ್ರೇರಣೆ ಏನು ಸಾಮಾನ್ಯವಾದುದೇ? ನಮ್ಮ ದೇಶಕ್ಕೆ ಅಂಟಿದ ಗುಲಾಮಿತನವನ್ನು ಕಿತ್ತೆಸೆವ ಪ್ರೇರಣೆ ಸ್ಫುರಿಸಬಲ್ಲ ಶ್ರಾವಣ ಹುಣ್ಣಿಮೆಯ ಈ ಹಬ್ಬ ಇಂದಿಗೂ ಆಪ್ಯಾಯಮಾನವಾಗಿಯೇ ಉಳಿದಿದೆ.

ಬಾಲ ಗಂಗಾಧರ ತಿಲಕರು ಗಣೇಶನ ಹಬ್ಬವನ್ನು ಸಾಮಾಜಿಕ ಕ್ರಾಂತಿಯ ಕಿಚ್ಚನ್ನಾಗಿ ಪರಿವರ್ತಿಸಿದರು. ಜೀವಂತ ಸಂಸ್ಕೃತಿಯೊಂದರ ಲಕ್ಷಣವೇ ಅದು. ರಕ್ಷಾಬಂಧನದ ಕಕ್ಷೆಗಳು ಇನ್ನಷ್ಟು ಮಗ್ಗುಲಿಗೆ ಹರವಿಕೊಳ್ಳಬೇಕಾಗಿದೆ. ಸಮಾಜಕ್ಕೆ ಅಂಟಿದ ಪಿಡುಗುಗಳಾದ ಜಾತೀಯತೆ, ಅಸ್ಪೃಶ್ಯತೆಗಳ ಕೊಳೆಯನ್ನು ಕಳೆಯಲು ಇದಕ್ಕಿಂತ ಮಿಗಿಲಾದ ಹಬ್ಬ, ಸದವಕಾಶ ಇನ್ನಾವುದಿದ್ದೀತು? ಸ್ವಾತಂತ್ರ್ಯದೊರಕಿ ಇಷ್ಟೊಂದು ವರುಷಗಳ ನಂತರವೂ ನಮ್ಮ ಕಂದಾಚಾರ, ಮೂಢನಂಬಿಕೆಗಳು ಪೂರ್ತಿಯಾಗಿ ಇನ್ನೂ ತೊಲಗಿಲ್ಲ. ಅವೆಲ್ಲ ನಮ್ಮ ದೇಶದ ಔನ್ನತ್ಯಕ್ಕೆ ಇನ್ನಿಲ್ಲದ ಕೊಡಲಿಯೇಟು ನೀಡುತ್ತಿವೆ. ಮೌಲ್ಯಗಳ ಜೊತೆಗೆ ಇರಿಸುವ ಒಂದು ಹೆಜ್ಜೆಯನ್ನು ಮೌಢ್ಯ ಹತ್ತು ಹೆಜ್ಜೆ ಹಿಂದಕ್ಕೆ ಜಾರಿಸುತ್ತದೆ.

ಕೃಷ್ಣ ಕುಚೇಲರ ಗೆಳೆತನಕ್ಕಿರುವ ದೈವತ್ವದ ಹಿರಿಮೆಯನ್ನು ಯಾರೂ ಅಲ್ಲಗಳೆಯಲಾರರು. ತಾನು ನೀಡುವ ಹಣ್ಣುಗಳ ರುಚಿ ರಾಮನಿಗೆ ಮುದ ನೀಡುತ್ತದೋ ಇಲ್ಲವೋ ಎಂದು ಹಣ್ಣುಗಳನ್ನು ಕಚ್ಚಿ ಪರೀಕ್ಷಿಸಿ, ತರಗೆಲೆಗಳ ತಲ್ಲಣಕ್ಕೆ, ಕೊಂಬೆಗಳ ಕದಲಿಕೆಗೆ 'ಎಂದು ಬರುವ ನನ್ನ ದಾಶರಥಿ' ಎಂದು ಕಾತರಿಸಿದ ಶಬರಿಯನ್ನು ಒಪ್ಪಿರುವ ಈ ನಾಡು ಜಾತಿ, ವರ್ಗಗಳ ಭೇದದಲ್ಲೇಕೆ ತೊಡಗಿದೆ? ಹರಿವರಕ್ತ, ಕುಡಿವ ನೀರು, ಸೇವಿಸುವ ಗಾಳಿ, ಓಡಾಡುವ ಭುವಿಯೊಂದೇ ಇರಲು ಈ ತಾರತಮ್ಯಗಳೇಕೆ? ಎಂದು ಗಂಟಲು ಹರಿದರೂ ಮೇಲುಕೀಳಿನ ಶನಿ ತೊಲಗುತ್ತಿಲ್ಲವೇಕೆ?

ಅಬಲವಾಡಿಯ ಮರ್ಯಾದಾ ಹತ್ಯೆ, ಉತ್ತರಪ್ರದೇಶದ ಮಾರಣಹೋಮ, ಬೀದರಿನ ಬಹಿಷ್ಕಾರ, ಧಾರವಾಡದ ದಿಗ್ಬಂಧನಗಳೆಲ್ಲ ನಮ್ಮ ಅಧಃಪತನದ ನಿಲುಮೆಗಳೇ ಅಲ್ಲವೇ? ಗೆರಟೆಯಲ್ಲಿ ಚಹಾ ಕುಡಿಯುವ ದೀನತೆ, ಅಡಿಕೆಯ ಹಾಳೆಯಲ್ಲಿ ಊಟ ಮಾಡಬೇಕಾದ ಅಪಮಾನಗಳು, ತಲೆಬುಡವಿಲ್ಲದ ಅವೈಜ್ಞಾನಿಕ ಆಚರಣೆಗಳು, ಪ್ರಾಣಕ್ಕೇ ಎರವಾಗುವ ಭೇದ ಬಾಹುಳ್ಯ ಎಂತು ಉದ್ಧರಿಸೀತು ಈ ಒಡಕು ತುಂಬಿದ ಸಮಾಜ?

ಮನುಜನ ಹುಟ್ಟು ಹೀಗೇ ಇರಬೇಕು, ಇಲ್ಲೇ ಇರಬೇಕು ಎಂಬುದಾಗಿ ನಿರ್ಧರಿಸಲು ಮನುಷ್ಯ ಯಾರೂ ಅಲ್ಲ. ಆದರೆ ಹೀಗೇ ಬದುಕಬೇಕು, ಮನುಷ್ಯನ ನಡುವಿನ ಭಾವನೆಗಳು ಇದೇ ಮಾದರಿಯಲ್ಲಿ ರೂಪುಗೊಳ್ಳಬೇಕು ಎನ್ನುವ ಕನಸಿಗೆ ರಕ್ಷೆ ಶ್ರೀರಕ್ಷೆಯಂತೆ ಕೆಲಸ ಮಾಡಬಲ್ಲುದು. ಒಂದೇ ತಾಯಿಯ ಹೊಟ್ಟೆಯಲ್ಲಿ ಹುಟ್ಟದಿದ್ದರೇನಂತೆ ಹೊತ್ತ ಭೂತಾಯಿ ಒಬ್ಬಳೇ ಅಲ್ಲವೇ? ಸಹೋದರತ್ವ ಎಂಬುದು ಅವಿನಾಶಿಯಾದ ನಿತ್ಯ ನಿರಂತರ ಉಕ್ಕುವ ಬತ್ತದ ಗಂಗೆ. ಕೈಗೆ ರಕ್ಷೆಕಟ್ಟಿ ಧ್ಯೇಯವನ್ನು ಹೃದಯಕ್ಕೆ ಛಾಪಿಸುವ, ಭಾವದಲ್ಲಿ ಬೆರೆತು ಉಕ್ಕುವ ಗುಣಗಳು ನಮ್ಮ ಪರಂಪರೆಯಲ್ಲಿವೆ.

ವೈಚಾರಿಕ ಯುದ್ಧದ ಪಟ್ಟುಗಳನ್ನು ನಿರಂತರವಾಗಿ ವಿಘಟನಾ ಶಕ್ತಿಗಳು ಪ್ರಯೋಗಿಸುತ್ತಿದೆ. ಅದನ್ನು ಎದುರಿಸಿ ಹಿಮ್ಮೆಟ್ಟಿಸಬೇಕಾದ ಕಾಲವಿಂದು ಬಂದಿದೆ. ವಿನಾಶಕ್ಕೆ ಕೊಂಡೊಯ್ಯುವ ವ್ಯಕ್ತಿಗಳಿಗೆ, ವಿಚಾರಕ್ಕೆ ಮಣೆ ಹಾಕುವ ಜನರು ಎಂದೂ ಇರುವವರೇ. ಹಾಗೆಯೇ, ಅವರನ್ನೆದುರಿಸಿ ಸಮಾಜಕ್ಕೆ ಸರಿಯಾದ ದಿಕ್ಕು ತೋರುವ ಜನರೂ ಇದ್ದಾಗ ಮಾತ್ರ ಮನುಕುಲದ ಪಯಣ ಸುಗಮ. ಯಾರೋ ಒಬ್ಬ ಅವತಾರಪುರುಷ ಬಂದು ವಿಶ್ವವನ್ನು ರಕ್ಷಣೆ ಮಾಡುವನೆಂದು ಕಾಯುವುದು ಮೂರ್ಖತನವೆನಿಸೀತು. ನಮ್ಮ ಸಮಾಜದ ರಕ್ಷಣೆ, ನಮ್ಮ ಧರ್ಮ, ಸಂಸ್ಕೃತಿಗಳ ರಕ್ಷಣೆಯನ್ನು ನಾವೇ ಮಾಡಬೇಕು. 'ಉದ್ಧರೇದಾತ್ಮನಾತ್ಮಾನಂ' (ತನ್ನನ್ನು ತಾನೇ ಉದ್ಧರಿಸಿಕೊಳ್ಳಬೇಕು) ಎಂದು ಭಗವಾನ್ ಶ್ರೀಕೃಷ್ಣ ಭಗವದ್ಗೀತೆಯಲ್ಲಿ ಹೇಳಿದ್ದಾನೆ. ಹಾಗಾಗಿ, ಒಂದು ಸಮಾಜವಾಗಿ ನಮ್ಮನ್ನು ನಾವು ರಕ್ಷಿಸಿಕೊಳ್ಳುವ, ನಮ್ಮ ಉನ್ನತಿಯ ಬಗ್ಗೆ ನಾವೇ ಯೋಚಿಸುವ ಅಗತ್ಯ ಯಾವಾಗಲೂ ಇದ್ದೇ ಇದೆ. ಒಬ್ಬ ವ್ಯಕ್ತಿ ಎಲ್ಲವನ್ನೂ ಮಾಡಿಬಿಡಲು ಸಾಧ್ಯವಿಲ್ಲ. ಆದ್ದರಿಂದಲೇ ಸಂಘಟನೆ ಬಹಳ ಮುಖ್ಯ. ಇಂದು ನಮಗೆ ಕಾಣಿಸುವ ದುರಾಚಾರಗಳನ್ನು ನೋಡಿದರೆ, ಪ್ರಪಂಚ ಬಹಳ ಕೆಟ್ಟುಹೋಗಿದೆ ಎನಿಸಬಹುದು. ಆದರೆ, ವಾಸ್ತವವಾಗಿ ಅಧರ್ಮಿಗಳ, ದುರಾಚಾರಿಗಳ ಸಂಖ್ಯೆ ಬಹಳ ಕಡಿಮೆ. ಆದರೆ, ಸಜ್ಜನರ ದನಿ ಎಲ್ಲೂ ಕೇಳಿಸದಿರುವುದರಿಂದ ದುರ್ಜನರ ದನಿಯೇ ಬಹಳ ದೊಡ್ಡದು ಎಂಬ ಭ್ರಮೆಯನ್ನು ನಮ್ಮಲ್ಲಿ ಮೂಡಿಸುತ್ತಿದೆ, ಅಷ್ಟೇ!

ಹಾಗಾಗಿ, ಸಜ್ಜನರ ಸಂಘಟನೆ ಇಂದಿನ ತುರ್ತು. ಹೆಚ್ಚು ಹೆಚ್ಚು ಸಜ್ಜನರು ಕ್ರಿಯಾಶೀಲರಾದಾಗ, ಈ ಸಮಾಜದ ಬಗ್ಗೆ ಯೋಚಿಸಿ, ಕೆಲಸ ಮಾಡಲು ಪ್ರಾರಂಭಿಸಿದಾಗ, ದುರ್ಜನರ ಅಟ್ಟಹಾಸ ತನ್ನಿಂದ ತಾನೇ ಕಡಿಮೆಯಾಗುತ್ತದೆ. ಕತ್ತಲೆಯನ್ನು ಓಡಿಸಲು, ಬೆಳಕು ಬೇಕು. 'ಕತ್ತಲು, ಕತ್ತಲು' ಎಂದು ಬೊಬ್ಬೆ ಹೊಡೆದರೇನು ಪ್ರಯೋಜನ? ಬೆಳಕನ್ನು ಬೀರಬಲ್ಲ ದೀಪವನ್ನು ಹೊತ್ತಿಸಬೇಕೆಂಬ ಪ್ರಜ್ಞೆ ನಮಗಿರಬೇಕು ತಾನೇ? ಒಂದು ದೀಪ ಸಾಲದಿದ್ದರೆ, ಹತ್ತು, ನೂರು, ಸಾವಿರ, ಲಕ್ಷ ದೀಪಗಳನ್ನು ಹೊತ್ತಿಸಬೇಕು. ಒಂದು ದೀಪದಿಂದ ಇನ್ನೊಂದು, ಮತ್ತೊಂದು ಹೀಗೆ ಹೊತ್ತಿಸುತ್ತಾ ಹೋದರೆ, ಕತ್ತಲೆ ಮಾಯವಾಗುತ್ತದೆ. ಇದೇನು ಬ್ರಹ್ಮವಿದ್ಯೆಯಲ್ಲ. ಅರ್ಥ ಮಾಡಿಕೊಳ್ಳಲು ಬಹಳ ಸರಳವಾದ, ಆಚರಿಸಲು ಬಹಳ ಸುಲಭವಾದ ವಿಷಯ. ಸಜ್ಜನರಾದ ನಾವು ಮನಸ್ಸು ಮಾಡಬೇಕಷ್ಟೇ, ಸಮಾಜಕ್ಕಾಗಿ ಸ್ವಲ್ಪ ಸಮಯಕೊಡಬೇಕಷ್ಟೇ!

ಅಂದಿನಿಂದ ಇಂದಿನವರೆಗೆ ವಿಶ್ವವನ್ನು ಪೊರೆದಿದ್ದು ಸನಾತನ ಧರ್ಮವೇ. ಮುಂದೆಯೂ ಪೊರೆಯುವುದಿದ್ದರೆ ಅದೊಂದು ಮಾತ್ರ. ಈ ಶ್ರಾವಣ ಹುಣ್ಣಿಮೆಯ ಈ ಹಬ್ಬದಂದು ಅಂತಹ ಧರ್ಮದ ಆಚರಣೆಗೆ, ತನ್ಮೂಲಕ ಅದರ ರಕ್ಷಣೆಗೆ ತೊಡಗುವ ದೀಕ್ಷೆಯನ್ನು ನಾವೆಲ್ಲ ತೊಡಬೇಕಾಗಿದೆ. ನಾಡಿನ ಸುಭದ್ರತೆ, ಸಮಾಜದ ಸಂಘಟನೆಗೆ ಈ ರಕ್ಷೆ ಕಾರಣವಾಗಲಿ.

– ಶಿವಪ್ರಸಾದ್ ಸುರ್ಯ

ಸಮರ್ಥ ಭಾರತ

ಒಂದು ಗುರಿ - ಹಲವು ದಾರಿ

# ಯೋಗ ಜೀವನಶೈಲಿ - ಆರೋಗ್ಯದ ಕೀಲಿಕೈ

'ಆರೋಗ್ಯವೇ ಭಾಗ್ಯ' ಎಂಬ ಮಾತನ್ನು ನಾವು ಕೇಳಿದ್ದೇವೆ. ಜೀವನದಲ್ಲಿ ಇಂದು ಹಣವಿದ್ದಲ್ಲಿ ಎಲ್ಲವನ್ನೂ ಖರೀದಿಸಬಹುದು – ಎಂಬ ಸ್ಥಿತಿಗೆ ಮಾನವಜೀವನ ತಲುಪಿದೆ. ಆದರೆ ಈ ಹಣ ಎಂದೂ ಆರೋಗ್ಯವನ್ನು ಕಾಪಾಡಲು ಸಾಧ್ಯವಿಲ್ಲ. ಹೀಗಾಗಿಯೇ ಇಂದು ಗಲ್ಲಿಗಲ್ಲಿಗಳಲ್ಲಿ ಆಸ್ಪತ್ರೆಗಳು ತಲೆಯೆತ್ತಿ ನಿಂತಿದ್ದರೂ ಅನಾರೋಗ್ಯ ಪೀಡಿತರ ಸಂಖ್ಯೆ ದಿನೇದಿನೇ ವೃದ್ಧಿಯಾಗುತ್ತಲೇ ಇದೆ. ಇಂದಿನ ಆಧುನಿಕತೆ ಕೊಳ್ಳುಭಾಕ ಸಂಸ್ಕೃತಿಯ ಪರಿಣಾಮವಾಗಿ ಅನಾರೋಗ್ಯದ ವೇಗ ಇನ್ನಷ್ಟು ವೃದ್ಧಿಸಿದೆ ಎಂಬುದು ನಮ್ಮ ಕಣ್ಣೆದುರಿಗೆ ಕಾಣುವ ಸತ್ಯ.

ಆರೋಗ್ಯವಂತ ಜೀವನಕ್ಕೆ ಒಂದೇ ಔಷಧ "ಯೋಗ". ಮನುಷ್ಯನನ್ನು ದೈಹಿಕವಾಗಿ, ಮಾನಸಿಕವಾಗಿ ಹಾಗೂ ಆಧ್ಯಾತ್ಮಿಕವಾಗಿ ಆರೋಗ್ಯವಾಗಿರಿಸಲು ಇದು ಸಹಕಾರಿ. 'ಯುಜ–ಸಮಾಧೌ' ಎಂಬ ಧಾತುವಿನಿಂದ 'ಯೋಗ' ಶಬ್ದವು ಹುಟ್ಟಿದೆ. ಮನಸ್ಸನ್ನು ಏಕಾಗ್ರಗೊಳಿಸುವಿಕೆ ಎಂಬುದಾಗಿ ಈ ಧಾತುವಿನ ಅರ್ಥ. ಮನಸ್ಸಿನ ಅತ್ಯಂತ ಏಕಾಗ್ರ ಸ್ಥಿತಿಯೇ ಯೋಗ. 'ಯೋಗ'ವು ಭಾರತದ ನಾಗರಿಕತೆ ಜಗತ್ತಿಗೆ ನೀಡಿದ ಅಮೂಲ್ಯ ಕೊಡುಗೆ.

ಮನಸ್ಸು ಚಂಚಲತೆಯನ್ನು ತನ್ನ ಸ್ವಭಾವವನ್ನಾಗಿಸಿಕೊಂಡಿದೆ. ಅದರ ಚಂಚಲತೆಯನ್ನು ಅಭ್ಯಾಸ ಮತ್ತು ವೈರಾಗ್ಯಗಳಿಂದ ಹೋಗಲಾಡಿಸಬೇಕಾಗುತ್ತದೆ. ಅದರಿಂದ ಪುರುಷಾರ್ಥದ ಸಾಧನೆಯು ಸಾಧ್ಯವಾಗುತ್ತದೆ. ಎಲ್ಲ ಪುರುಷಾರ್ಥಸಾಧನೆಗೂ ಬೇಕಾಗುವ ದೈಹಿಕ–ಮಾನಸಿಕ ಸ್ವಾಸ್ಥ್ಯ, ಏಕಾಗ್ರತೆಯನ್ನು ಯೋಗಶಾಸ್ತ್ರವು ನೀಡುತ್ತದೆ. ಮಾತ್ರವಲ್ಲ ಲೌಕಿಕವಾದ ಅನೇಕ ವಿಧದ ಸಾಧನೆಗಳಲ್ಲಿ ಯೋಗಶಾಸ್ತ್ರವು ಪ್ರಯೋಜನಕಾರಿಯಾಗಿದೆ. ಏಕೆಂದರೆ ಎಲ್ಲ ಸಾಧನೆಗಳಿಗೂ ಬೇಕಾಗುವ ಶರೀರ–ಮನಸ್ಸುಗಳ ಸ್ವಾಸ್ಥ್ಯ, ಸಮತೋಲನ ಮತ್ತು ಏಕಾಗ್ರತೆಯನ್ನು ಯೋಗ ನೀಡುತ್ತದೆ.

ಯೋಗ ದೈಹಿಕ ವ್ಯಾಯಾಮಕ್ಕೆ ಸೀಮಿತವಾದುದಲ್ಲ; ಬದಲಾಗಿ ಅದು ಪೂರ್ಣವಾದ ಜೀವನ ವಿಧಾನ. ಶರೀರ, ಮನಸ್ಸು, ಬುದ್ಧಿ ಮತ್ತು ಆತ್ಮಗಳ ನಡುವೆ ಅದು ಸಾಮರಸ್ಯವನ್ನು ಸಾಧಿಸುತ್ತದೆ. ಮಹರ್ಷಿ ಪತಂಜಲಿ ಮೊದಲಾದ ಋಷಿಮುನಿಗಳು ಇದನ್ನು ರೂಪಿಸಿದ್ದಾರೆ. ಗ್ರಂಥಗಳಲ್ಲಿ ಅದನ್ನು ಚಂಚಲವಾದ ಮನಸ್ಸಿನ ನಿಯಂತ್ರಣ (ಯೋಗಃ ಚಿತ್ತವೃತ್ತಿ ನಿರೋಧಃ), ಮನಸ್ಸನ್ನು ಶಾಂತಗೊಳಿಸುವ ಮಾರ್ಗ (ಮನಃಪ್ರಶಮನೋಪಾಯಃ ಯೋಗಃ) ಮತ್ತು ಸಮಾನ ದೃಷ್ಟಿ (ಸಮತ್ವಂ ಯೋಗ ಉಚ್ಯತೇ) ಮುಂತಾಗಿ ವರ್ಣಿಸಲಾಗಿದೆ. ಆದರಿಂದ ಶಾಂತಿಯುತ ಮತ್ತು ಆರೋಗ್ಯಕರ ಜೀವನವನ್ನು ಸಾಧಿಸಬಹುದು; ಶಾರೀರಿಕ, ಮಾನಸಿಕ, ಬೌದ್ಧಿಕ, ಭಾವನಾತ್ಮಕ ಹಾಗೂ ಆಧ್ಯಾತ್ಮಿಕವಾಗಿ ಉನ್ನತ ಸಂಸ್ಕಾರವನ್ನು ಪಡೆಯಬಹುದು. ಆದ್ದರಿಂದ ಇಂದು ಜನಸಾಮಾನ್ಯರು, ಸೆಲೆಬ್ರಿಟಿಗಳು, ಉದ್ಯಮಿಗಳು, ಜಗತ್ತಿನಾದ್ಯಂತ ವಿವಿಧ ಸಂಸ್ಕೃತಿಗಳ ಮುತ್ಸದ್ದಿಗಳು ಸೇರಿದಂತೆ ಜನ ವ್ಯಾಪಕವಾಗಿ ಯೋಗದ ಕಡೆಗೆ ಆಕರ್ಷಿತರಾಗುತ್ತಿದ್ದಾರೆ.

ಇಂದು ಯೋಗ ಜಗನ್ಮಾನ್ಯತೆಗೆ ಪಾತ್ರವಾಗುತ್ತಿದೆ. ಭಾರತದ ಪ್ರಧಾನಮಂತ್ರಿ ಮೋದಿ ಅವರ ಆಶಯದಂತೆ ವಿಶ್ವಸಂಸ್ಥೆ ಜೂನ್ 21 ನ್ನು 'ಅಂತಾರಾಷ್ಟ್ರೀಯ ಯೋಗದಿನ' ಎಂದು ಘೋಷಿಸಿದೆ. ಜಗತ್ತಿನ 180ಕ್ಕೂ ಅಧಿಕ ರಾಷ್ಟ್ರಗಳು ಈ ದಿನವನ್ನು ವಿಶಿಷ್ಟವಾಗಿ ಆಚರಿಸಿವೆ. ಹೀಗಾಗಿ ಯೋಗಭೂಮಿ ಭಾರತದಲ್ಲಿ ಜನಿಸಿದ ನಾವು ಯೋಗದ ಸಂದೇಶವನ್ನು ಇನ್ನಷ್ಟು ವ್ಯಾಪಕವಾಗಿ ಪ್ರಸಾರಮಾಡಬೇಕಾದ ಹೊಣೆಯನ್ನು ಸಹಜವಾಗಿ ಹೊಂದಿದ್ದೇವೆ.

## ಚಟುವಟಿಕೆಯ ಬಗ್ಗೆ

ಯೋಗದ ಕುರಿತು ಜಾಗೃತಿ ಮೂಡಿಸಲು ಹಾಗೂ ಯೋಗದ ಮಹತ್ತ್ವವನ್ನು ಜನಸಾಮಾನ್ಯರಿಗೆ ಪರಿಚಯಿಸಲು ರಾಷ್ಟ್ರೀಯ ಸ್ವಯಂಸೇವಕ ಸಂಘ ಪ್ರೇರಿತವಾದ ಅನೇಕ ಸಂಘ–ಸಂಸ್ಥೆಗಳು ಕಾರ್ಯನಿರ್ವಹಿಸುತ್ತಿವೆ. ಈ ವಿಷಯಕ್ಕೆ ಸಂಬಂಧಿಸಿದಂತೆ ಸ್ಥೂಲವಾಗಿ ಕೆಲವು ಚಟುವಟಿಕೆಗಳನ್ನು ಇಲ್ಲಿ ಪಟ್ಟಿ ಮಾಡಲಾಗಿದೆ

- ಪ್ರತಿಯೊಬ್ಬರಿಗೂ ಯೋಗ ಶಿಕ್ಷಣ ದೊರಕುವಂತೆ ಮಾಡುವ ಉದ್ದೇಶದಿಂದ ಯೋಗ ತರಬೇತಿ ಶಿಬಿರಗಳು.
- ಯೋಗದ ಬಗ್ಗೆ ಜನರಲ್ಲಿ ಅರಿವು ಮೂಡಿಸಲು ಅನೇಕ ಕಡೆಗಳಲ್ಲಿ ಉಚಿತ ಯೋಗ ತರಗತಿ ಶಿಬಿರ ಹಾಗೂ ಯೋಗಪ್ರದರ್ಶನ ಕಾರ್ಯಕ್ರಮಗಳ ಆಯೋಜನೆ
- ಯೋಗದ ಮೂಲಕ ಸಾಮಾಜಿಕ ದೃಷ್ಟಿಕೋನ ಬೆಳೆಸುವ ಸಲುವಾಗಿ ಯೋಗಶಿಕ್ಷಾರ್ಥಿಗಳಿಗಾಗಿ ಉಪನ್ಯಾಸ ಹಾಗೂ ವಿವಿಧ ಸಾಮಾಜಿಕ ಚಟುವಟಿಕೆಗಳ ಪರಿಚಯ, ಜೋಡಣೆ.
- ಸಾಮಾನ್ಯ ಯೋಗಾಸಕ್ತರಿಗೆ ಯೋಗ ತರಬೇತಿ ನೀಡಿ ಯೋಗಶಿಕ್ಷಕರಾಗಿ ರೂಪಿಸಿ, ಸ್ವಯಂ ಯೋಗ ಕೇಂದ್ರ ನಡೆಸುವ ಸಾಮರ್ಥ್ಯ ಬೆಳೆಸುವುದು.
- ಯೋಗದ ಕುರಿತು ಸಂಶೋಧನೆ. ಯೋಗ ವಿಶ್ವವಿದ್ಯಾಲಯದ ಮುಖಾಂತರ ಯೋಗದಲ್ಲಿ ಡಿಪ್ಲೊಮಾ, ಬಿ.ಎಸ್ಸಿ., ಎಂ.ಎಸ್ಸಿ. ಮತ್ತು ಪಿಎಚ್.ಡಿ ಹಾಗೂ ಇನ್ನಿತರ ಕೋರ್ಸ್‌ಗಳು.
- ಯೋಗದ ಕುರಿತಾದ ಸಾಹಿತ್ಯಗಳ ಮುದ್ರಣ–ಪ್ರಸಾರ

## ಸಂಘಟನೆಗಳು

**ರಾಷ್ಟ್ರೋತ್ಥಾನ ಪರಿಷತ್**

- ಕಳೆದ 43 ವರ್ಷಗಳಿಂದ ಯೋಗ ತರಬೇತಿ ನೀಡುತ್ತಿದೆ
- ಕರ್ನಾಟಕದ 7 ಕೇಂದ್ರಗಳಲ್ಲಿ ಸುಮಾರು 1900 ಮಂದಿ ನಿತ್ಯ ಯೋಗಾಭ್ಯಾಸ
- ಯೋಗದ ಜೊತೆಗೆ ಸಾಮಾಜಿಕ ಕಳಕಳಿ ಮೂಡಿಸುವ ವಿವಿಧ ಚಟುವಟಿಕೆಗಳು

**ಹಿಂದೂ ಸೇವಾ ಪ್ರತಿಷ್ಠಾನ**

- ನಿತ್ಯ 7 ತರಬೇತಿ ಕಾರ್ಯಕ್ರಮಗಳು
- ಶಿಕ್ಷಕ ತರಬೇತಿ
- ಸಮುದಾಯಗಳನ್ನು ಸಾಮಾಜಿಕ ಚಟುವಟಿಕೆಗಳಲ್ಲಿ ತೊಡಗಿಸುವ ಪ್ರಯತ್ನ.

**ಪತಂಜಲಿ ಯೋಗ ಶಿಕ್ಷಣ ಸಮಿತಿ**

- 30ಕ್ಕೂ ಹೆಚ್ಚು ವರ್ಷಗಳಿಂದ ಉಚಿತ ಯೋಗ ತರಬೇತಿ ಕಾರ್ಯಕ್ರಮಗಳು. ಸುಮಾರು 10 ಲಕ್ಷ ಫಲಾನುಭವಿ ಕುಟುಂಬಗಳು
- ಕರ್ನಾಟಕದಲ್ಲಿ 320 ಕೇಂದ್ರಗಳು
- ಉಚಿತ ಶಿಕ್ಷಕ ತರಬೇತಿ ನೀಡಲಾಗುತ್ತಿದೆ

**ಸ್ವಾಮಿ ವಿವೇಕಾನಂದ ಯೋಗ ಅನುಸಂಧಾನ ಸಂಸ್ಥಾನ**

- ಜಗತ್ಪ್ರಸಿದ್ಧ ಯೋಗ ವಿಶ್ವವಿದ್ಯಾಲಯ
- ಯೋಗ ಮತ್ತು ಆಧ್ಯಾತ್ಮಿಕ ವಿಚಾರಗಳಲ್ಲಿ – ಡಿಪ್ಲೊಮಾ, ಬಿ.ಎಸ್ಸಿ. ಎಂ.ಎಸ್ಸಿ. ಮತ್ತು ಪಿಎಚ್.ಡಿ.
- ಆರೋಗ್ಯಧಾಮ – ಯೋಗ ಚಿಕಿತ್ಸಾ ಕೇಂದ್ರ
- ಭಾರತ ಮತ್ತು ವಿದೇಶಗಳ ಸಾವಿರಾರು ಯೋಗ ಶಿಕ್ಷಕರಿಗೆ ತರಬೇತಿ ನೀಡಲಾಗಿದೆ.

## ನಾವೇನು ಮಾಡಬಹುದು:

- ಯೋಗವನ್ನು ಕಲಿತು, ಅದನ್ನು ನಮ್ಮ ದಿನಚರಿಯ ಒಂದು ಭಾಗವಾಗಿ ಅಳವಡಿಸಿಕೊಳ್ಳುವುದು.
- ಯೋಗತರಬೇತಿ ಪಡೆದು ನಮ್ಮ ಊರಿನಲ್ಲಿ ಯೋಗಕೇಂದ್ರವನ್ನು ತೆರೆಯುವುದು.
- ನಮ್ಮ ಊರಿನ ಸರ್ಕಾರಿ ಶಾಲೆ ಮತ್ತಿತರ ಸಾರ್ವಜನಿಕ ಸ್ಥಳಗಳಲ್ಲಿ ಉಚಿತ ಯೋಗ ತರಗತಿಗಳನ್ನು ನಡೆಸುವುದು.
- ಸೇವಾಬಸ್ತಿ (ಸ್ಲಂ, ಕೊಳಚೇಗೇರಿ), ಕಾಲೊನಿಗಳಲ್ಲಿ ಸ್ವಚ್ಛತೆಯ ಬಗೆಗೆ ಜಾಗೃತಿ ಮೂಡಿಸುವುದು. ಹಾಗೂ ಅಲ್ಲಿನ ಜನಸಾಮಾನ್ಯರನ್ನು ಯೋಗಾಸಕ್ತರಾಗಿ ಪರಿವರ್ತಿಸುವುದು.
- 'ಯೋಗ'ದ ಮೂಲಕ ಸಾಮಾಜಿಕ ಪರಿವರ್ತನೆಯ ಕಾರ್ಯಚಟುವಟಿಕೆಗಳನ್ನು ಆಯೋಜಿಸುವುದು

**ಸಂಪರ್ಕ**

**ರಾಷ್ಟ್ರೋತ್ಥಾನ ಯೋಗ ಕೇಂದ್ರ** – 080–26612730
**ಹಿಂದು ಸೇವಾಪ್ರತಿಷ್ಠಾನ** – 080 26608926
**ಪತಂಜಲಿ ಯೋಗ ಶಿಕ್ಷಣ ಸಮಿತಿ** – 94487 87986
**ಸ್ವಾಮಿ ವಿವೇಕಾನಂದ ಯೋಗ ಅನುಸಂಧಾನ ಸಂಸ್ಥಾನ** – 080 2661 2669



ನೆಲದ ಮಾತು

# ಕೀಟಗಳ ಆಕರ್ಷಿಸಲೊಂದು ತೋಟ

ರಾಸಾಯನಿಕಗಳ ಹಂಗಿಲ್ಲದೇ ನೈಸರ್ಗಿಕವಾಗಿ ಬೆಳೆಗಳ ಇಳುವರಿ ಹೆಚ್ಚಿಸಬೇಕೆಂದರೆ ಅದು ಪರಾಗಸ್ಪರ್ಶ ಕ್ರಿಯೆಯಿಂದ ಮಾತ್ರ ಸಾಧ್ಯ. ಆದರೆ ರಾಸಾಯನಿಕಗಳ ಅಬ್ಬರ ಹಾಗೂ ಏಕರೂಪದ ಬೆಳೆಗಳ ಉತ್ಪಾದನೆ ಹೆಚ್ಚಳದಿಂದಾಗಿ ಪರಾಗಸ್ಪರ್ಶ ಮಾಡುವ ಕೀಟಗಳೆಲ್ಲ ಕಣ್ಮರೆಯಾಗುತ್ತಿವೆ. ಪರಿಣಾಮವಾಗಿ ಇಳುವರಿ ಕುಂಠಿತವಾಗಿ, ಗುಣಮಟ್ಟದ ಬೆಳೆಗಳ ಲಭ್ಯತೆ ಕುಗ್ಗಿದೆ. ಇದನ್ನು ಸರಿಪಡಿಸಲು, ಪರಾಗಸ್ಪರ್ಶ ಹೆಚ್ಚಿಸಲು ಕೀಟಗಳನ್ನು ಆಕರ್ಷಿಸುವ ಗಿಡಗಳನ್ನು ತೋಟಗಳಲ್ಲಿ ಬೆಳೆಸುವುದು ಮುಖ್ಯವಾಗಿದೆ. ಇದರ ಕುರಿತು ಬೆಂಗಳೂರಿನ ರಾಷ್ಟ್ರೀಯ ಕೃಷಿ ಕೀಟಗಳ ಪ್ರಾಮುಖ್ಯ ಸಂಪನ್ಮೂಲ (ಎನ್‌ಬಿಎಐಆರ್) ಸಂಸ್ಥೆ ರೈತರಿಗೆ ಮಾಹಿತಿ ನೀಡುತ್ತಿದೆ.

ರೈತರಿಗೆ ಹಾಗೂ ಪರಿಸರಕ್ಕೆ ಒಂದಲ್ಲ ಒಂದು ರೀತಿ ಉಪಯೋಗವಾಗುವ ಲಕ್ಷಾಂತರ ಕೀಟಗಳು ದೇಶದಲ್ಲಿವೆ. ಅವುಗಳಲ್ಲಿ ಸದ್ಯಕ್ಕೆ 60 ಸಾವಿರ ಕೀಟಗಳನ್ನು ಮಾತ್ರ ಅಧಿಕೃತವಾಗಿ ಪತ್ತೆ ಮಾಡಲಾಗಿದೆ. ಇವುಗಳಲ್ಲಿ ಪರಾಗಸ್ಪರ್ಶ ಮಾಡುವ ಕೀಟಗಳು ಸಾವಿರಾರು. ಇವುಗಳಲ್ಲಿ ಕೆಲವು ಅರಣ್ಯಗಳಲ್ಲಿದ್ದರೆ, ಮತ್ತೆ ಕೆಲವು ಜನವಸತಿ ಪ್ರದೇಶಗಳಲ್ಲಿ ಜೀವಿಸುತ್ತವೆ. ಅರಣ್ಯಗಳಲ್ಲಿರುವ ಕೀಟಗಳು ವಾತಾವರಣ ಬದಲಾದಂತೆ ವಲಸೆಯೂ ಬರುತ್ತವೆ. ಸದ್ಯಕ್ಕೆ ಮೂರರಿಂದ ನಾಲ್ಕುಸಾವಿರ ಕೀಟಗಳು ಮಾತ್ರ ರಾಜ್ಯದಲ್ಲಿವೆ. ಇವುಗಳು ವಾತಾವರಣ ಹಾಗೂ ಅವುಗಳ ಅಗತ್ಯಕ್ಕೆ ತಕ್ಕಂತೆ ಪ್ರದೇಶಗಳನ್ನು ಆಯ್ಕೆ ಮಾಡಿಕೊಂಡು ಜೀವಿಸುತ್ತಿವೆ. ಒಂದೊಂದು ಪರಾಗಸ್ಪರ್ಶ ಕೀಟವೂ ಐದಕ್ಕೂ ಹೆಚ್ಚು ಬೆಳೆಗಳಲ್ಲಿ ಪರಾಗಸ್ಪರ್ಶ ಮಾಡುತ್ತದೆ. ಆದರೆ ಪರಾಗಸ್ಪರ್ಶ ಮಾಡಲು ಬರುವ ಕೀಟಗಳು ಜೀವಿಸಲು ಆಹಾರ, ವಾಸಿಸಲು ಗೂಡು ಹಾಗೂ ಅಗತ್ಯ ವಾತಾವರಣವನ್ನು ನೋಡಿ ಅಲ್ಲಿ ವಾಸಿಸುತ್ತವೆ. ಅದಕ್ಕಾಗಿ ಪರಾಗಸ್ಪರ್ಶ ಮಾಡುವ ಕೀಟಗಳನ್ನು ಆಕರ್ಷಣೆ ಮಾಡಲು ಪ್ರತ್ಯೇಕವಾಗಿ ಕೆಲವೊಂದು ಗಿಡಗಳನ್ನು ನೆಡಬೇಕು. ಮನೆಯ ಬಳಿ ನೆಡುವ ಬಿಳಿ ಎಕ್ಕದ ಗಿಡ, ನೀಲಿ ಎಕ್ಕದ ಗಿಡ, ಕಪ್ಪು ತುಳಸಿ, ಜ್ಯೂಸ್ ಕಾಯಿಯ ಬಳ್ಳಿ, ಸಿಲ್ವಾನ್ ಫೀನಿಯಾ ಪಲ್ಚರಿಯಾ, ಅಮೃತ ಬಳ್ಳಿ ಹೀಗೆ ನೂರಾರು ಗಿಡಗಳು ನಾನಾ ರೀತಿಯ ದುಂಬಿ, ಚಿಟ್ಟೆ, ಜೇನು ನೊಣಗಳನ್ನು ಆಕರ್ಷಿಸುತ್ತವೆ.

ಪರಾಗಸ್ಪರ್ಶ ಕ್ರಿಯೆಯಲ್ಲಿ ತೊಡಗುವ ಕೀಟಗಳು ಮತ್ತು ಅವುಗಳನ್ನು ಆಕರ್ಷಿಸುವ ಗಿಡಗಳ ಕುರಿತಂತೆ ಸತತವಾಗಿ ಸಂಶೋಧನೆ ನಡೆಸುತ್ತಿರುವ ಎನ್‌ಬಿಎಐಆರ್, ಪರಾಗಸ್ಪರ್ಶ ಮಾಡುವ ಕೀಟಗಳನ್ನು ಆಕರ್ಷಿಸುವ ಗಿಡಗಳು, ಯಾವ ಬೆಳೆಗೆ ಯಾವ ಗಿಡಗಳನ್ನು ನೆಡಬೇಕು, ಎಷ್ಟು ಎಕರೆಗೆ ಎಷ್ಟು ಗಿಡಗಳನ್ನು ನೆಡಬೇಕು ಎಂದು ರೈತರಿಗೆ ಉಚಿತವಾಗಿ ಮಾಹಿತಿ ನೀಡುತ್ತಿದೆ. ಇದರೊಂದಿಗೆ ಸಂಶೋಧನೆ ನಡೆಸುತ್ತಿರುವ ಸ್ಥಳದಲ್ಲಿ ನಿರ್ಮಿಸಿರುವ ಪರಾಗಸ್ಪರ್ಶ ಕೀಟಗಳ ಸಂರಕ್ಷಣೆ ಹಾಗೂ ಅವುಗಳನ್ನು ಆಕರ್ಷಿಸುವ ಉದ್ಯಾನದಲ್ಲಿ ಕೀಟಗಳು ಮತ್ತು ಗಿಡಗಳನ್ನು ನೇರವಾಗಿ ವೀಕ್ಷಿಸುವ ಅವಕಾಶವನ್ನೂ ಕಲ್ಪಿಸಿದೆ.

'ಸದ್ಯಕ್ಕೆ ಈ ಉದ್ಯಾನದಲ್ಲಿ 200ಕ್ಕೂ ಹೆಚ್ಚು ವಿಭಿನ್ನ ರೀತಿಯ ಗಿಡಗಳನ್ನು ನೆಡಲಾಗಿದ್ದು, ನೂರಕ್ಕೂ ಹೆಚ್ಚು ಪರಾಗಸ್ಪರ್ಶ ಮಾಡುವ ಕೀಟಗಳ ಸಂರಕ್ಷಣೆ ಮಾಡಲಾಗಿದೆ. ಹೀಗಾಗಿ ರೈತರು ತಾವು ಬೆಳೆಯುವ ಬೆಳೆಗೆ ತಕ್ಕಂತೆ ಕೀಟಗಳನ್ನು ಆಕರ್ಷಿಸುವ ಗಿಡಗಳನ್ನು ಆಯ್ಕೆ ಮಾಡಿಕೊಳ್ಳಬಹುದು. ಇಂತಹ ಗಿಡಗಳನ್ನು ಬೆಳೆಗಳ ಮಧ್ಯದಲ್ಲಿ ಒಂದು ಅಥವಾ ಎರಡನ್ನು ಬೆಳೆಸಬಹುದು. ಉಳಿದಂತೆ ಬದುಗಳ ಮೇಲೆ, ಬೇಲಿ ಇರುವ ಸ್ಥಳದಲ್ಲಿ ಬೆಳೆಸಬಹುದು. ಇದರಿಂದ ಈ ಗಿಡಗಳಿಗೆಂದೇ ಸ್ಥಳವನ್ನು ಮೀಸಲಾಗಿಡುವ ಅಗತ್ಯ ಇರುವುದಿಲ್ಲ ಎಂದು ಎನ್‌ಬಿಎಐಆರ್ ನಿರ್ದೇಶಕರ ಅಭಿಪ್ರಾಯ.

'ಪರಾಗಸ್ಪರ್ಶ ಮಾಡುವ ಕೀಟಗಳನ್ನು ಒಮ್ಮೆ ಆಕರ್ಷಿಸಿದರೆ ಸಾಕು, ಅವುಗಳು ಸುತ್ತಮುತ್ತಲಿನ ಪ್ರದೇಶದಲ್ಲಿರುವ 10 ಕಿ.ಮೀ. ವ್ಯಾಪ್ತಿಯಲ್ಲಿನ ಪ್ರದೇಶಗಳಲ್ಲಿ ಪರಾಗಸ್ಪರ್ಶ ಮಾಡುತ್ತವೆ. ಆದರೆ ಕ್ರಿಮಿನಾಶಕ ಹಾಗೂ ಕೀಟನಾಶಗಳ ಬಳಕೆ ಹೆಚ್ಚಾಗಿದ್ದರೆ ಈ ಕೀಟಗಳು ಬದುಕುವ ಅವಕಾಶ ತೀರಾ ವಿರಳ. ಅದಕ್ಕಾಗಿ ಇಂತಹ ಕೀಟಗಳನ್ನು ಆಕರ್ಷಿಸುವ ಗಿಡಗಳನ್ನು ನೆಡುವ ರೈತರು ಕ್ರಿಮಿನಾಶಕಗಳ ಬಳಕೆ ಕಡಿಮೆ ಮಾಡಬೇಕು. ಇಲ್ಲವಾದಲ್ಲಿ ಬೆಳೆಗಳನ್ನು ಹಾಳು ಮಾಡುವ ಕೀಟಗಳ ನಾಶಕ್ಕೆ ನಾವೇ ಅಭಿವೃದ್ಧಿಪಡಿಸಿರುವ ಜೈವಿಕ ಕೀಟನಾಶಕಗಳನ್ನು ನೀಡುತ್ತೇವೆ. ಇದರಿಂದ ಕ್ರಿಮಿನಾಶಕಗಳ ಬಳಕೆ ತಡೆಯಬಹುದು ಎಂದವರು ತಿಳಿಸಿದ್ದಾರೆ.

ಒಂದೊಂದು ಗಿಡಗಳು ಕನಿಷ್ಠ 5ಕ್ಕೂ ಹೆಚ್ಚು ಕೀಟಗಳನ್ನು ಆಕರ್ಷಿಸುತ್ತವೆ. ಅದರಲ್ಲೂ ಕೆಲವೊಂದು ಹತ್ತು ಹನ್ನೊಂದು ಕೀಟಗಳನ್ನು ಆಕರ್ಷಿಸುತ್ತವೆ. ಹೀಗಾಗಿ ಕೇವಲ ಒಂದು ಬೆಳೆಗೆ ಅಗತ್ಯವಾದ ಗಿಡಗಳನ್ನು ನೆಡುವ ಬದಲು ಎರಡು ಮೂರು ರೀತಿಯ ಗಿಡಗಳನ್ನು ತೋಟ ಅಥವಾ ಜಮೀನಿನಲ್ಲಿ ವ್ಯರ್ಥವಾಗಿ ಇರುವ ಸ್ಥಳಗಳಲ್ಲಿ ನಟ್ಟರೆ ಉತ್ತಮ.

**ಮಾಹಿತಿಗಾಗಿ:** ಎನ್‌ಬಿಎಐಆರ್ ಸಂಸ್ಥೆ, ಪರಾಗಸ್ಪರ್ಶ ಕೀಟಗಳನ್ನು ಆಕರ್ಷಿಸುವ ಉದ್ಯಾನ, ಮದರ್ ಡೈರಿ ಸಮೀಪ, ಯಲಹಂಕ, ಬೆಂಗಳೂರು. ದೂ. 080–23511982

– ಕೃಪೆ: ಪ್ರಜಾವಾಣಿ

**ಸಂಪಾದಕೀಯ ಸಹಕಾರ** ಶ್ರೀವತ್ಸ, ಸತ್ಯನಾರಾಯಣ ಶಾನಭಾಗ್, ವಿನಾಯಕ ಅಣ್ಣಯ್ಯ, ರಾಧಾಕೃಷ್ಣ ಹೊಳ್ಳ, ರಾಜೇಶ್ ಪದ್ಮಾರ್, ಮೊಳಹಳ್ಳಿ ಅನಿಲ್‌ಕುಮಾರ್

# ಸಾಲುದ್ದದ ಸುದ್ದಿಗಳು



- ನೂತನವಾಗಿ ರಚನೆಯಾಗಲಿರುವ ಸಂವಿಧಾನದಿಂದ 'ಜಾತ್ಯತೀತ' ಪದವನ್ನು ಕೈಬಿಡಲು ನೇಪಾಳ ನಿರ್ಧರಿಸಿದೆ. ದೇಶದ ಧಾರ್ಮಿಕ ಮನೋಭಾವವನ್ನು ಸೂಚಿಸುವ ನಿಟ್ಟಿನಲ್ಲಿ ಈ ಪದ ಸೂಕ್ತವಲ್ಲ ಎಂಬ ಅಭಿಪ್ರಾಯ ವ್ಯಕ್ತವಾದ ಹಿನ್ನೆಲೆಯಲ್ಲಿ ಈ ನಿರ್ಧಾರ ಕೈಗೊಂಡಿದೆ. ಇದಕ್ಕೆ ನೇಪಾಳದ ಪ್ರಮುಖ ರಾಜಕೀಯ ಪಕ್ಷಗಳು ಒಪ್ಪಿಗೆ ಸೂಚಿಸಿವೆ. 2007ರ ತನಕ ನೇಪಾಳ ಹಿಂದೂ ರಾಷ್ಟ್ರ ಎಂದೇ ಖ್ಯಾತಿ ಪಡೆದಿತ್ತು. ಆದರೆ 2007ರಲ್ಲಿ ಕಮ್ಯುನಿಸ್ಟ್ ಪಾರ್ಟಿ ಅಧಿಕಾರಕ್ಕೆ ಬಂದ ನಂತರ ಇದನ್ನು ಬದಲಾಯಿಸಿ ಸೆಕ್ಯುಲರ್ ಪದ ಸೇರಿಸಿಲಾಗಿತ್ತು.



- **ಕಡ್ಡಾಯ ಶಿಕ್ಷಣ ಕಾಯ್ದೆ ಜಾರಿಯಾಗಿ 6 ವರ್ಷ ಕಳೆದಿದ್ದರೂ ದೇಶದಲ್ಲಿ ಸುಮಾರು 60 ಲಕ್ಷ ವಿದ್ಯಾರ್ಥಿಗಳು ಶಾಲೆಯಿಂದ ಹೊರಗುಳಿದಿದ್ದಾರೆ ಎಂಬ ಸಂಗತಿ ರಾಷ್ಟ್ರೀಯ ಸಮೀಕ್ಷಾ ದಾಖಲೆಯಿಂದ ತಿಳಿದುಬಂದಿದೆ. ಈ ದಾಖಲೆಗಳ ಪ್ರಕಾರ ಸರ್ವಶಿಕ್ಷಾ ಅಭಿಯಾನದಂತೆ 2014ರಲ್ಲಿ 6 ರಿಂದ 13ರ ವಯೋಮಿತಿಯ 20.4 ಕೋಟಿ ಮಕ್ಕಳು ಶಿಕ್ಷಣ ಸೌಲಭ್ಯ ಪಡೆದಿದ್ದಾರೆ. ಇದೇ ವೇಳೆ ಶಿಕ್ಷಕರಿಗೆ ಅವರ ಸೇವಾವಧಿಯಲ್ಲಿ ನಿಗದಿತ ಅವಧಿಗೆ ಗ್ರಾಮೀಣ ಸೇವೆ ಕಡ್ಡಾಯಗೊಳಿಸಿ ಕೇಂದ್ರ ಮಾನವ ಸಂಪನ್ಮೂಲ ಇಲಾಖೆ ಯೋಜನೆ ರೂಪಿಸಿದೆ.**



- ಭಾರತೀಯ ವಿಜ್ಞಾನ ಸಂಸ್ಥೆ (ಐಐಎಸ್‌ಸಿ)ಯ ಕೀಟ ಜೀವವಿಜ್ಞಾನಿ ಪ್ರೊ. ರಾಘವೇಂದ್ರ ಗದಗ್‌ಕರ್ ಅವರಿಗೆ ಜರ್ಮನಿಯ ಅತ್ಯುನ್ನತ ನಾಗರಿಕ ಪ್ರಶಸ್ತಿ 'ಕ್ರಾಸ್ ಆಫ್ ಆರ್ಡರ್ ಆಫ್ ದಿ ಮೆರಿಟ್' ಲಭಿಸಿದೆ. ಬೆಂಗಳೂರಿನ ಐಐಎಸ್‌ಸಿಯ ಸೆಂಟರ್ ಫಾರ್ ಇಕಾಲಜಿಕಲ್ ಸ್ಟಡೀಸ್ ಹಾಗೂ ಇಂಡಿಯನ್ ನ್ಯಾಷನಲ್ ಸೈನ್ಸ್ ಅಕಾಡೆಮಿಯಲ್ಲಿ ಸೇವೆ ಸಲ್ಲಿಸುತ್ತಿರುವ ಇವರು 270 ಸಂಶೋಧನ ಪ್ರಬಂಧಗಳನ್ನು ಮತ್ತು ಎರಡು ಪುಸ್ತಕಗಳನ್ನು ಪ್ರಕಟಿಸಿದ್ದಾರೆ. ಪ್ರೊ. ಗದಗ್‌ಕರ್ ಅವರು ಬಿಹೇವಿಯರಲ್ ಇಕಾಲಜಿ ಮತ್ತು ಸೋಷಿಯೋ ಬಯಾಲಜಿಯಲ್ಲಿ ಅಪ್ರತಿಮ ಕೊಡುಗೆ ನೀಡಿದ್ದಾರೆ. ಅದರಲ್ಲೂ, ಭಾರತ ಮತ್ತು ಜರ್ಮನಿ ನಡುವಿನ ಸಂಶೋಧನ ಸಂಬಂಧವನ್ನು ವೃದ್ಧಿಸುವಲ್ಲಿ ನಿರಂತರ ಶ್ರಮ ಹಾಕಿದ್ದಾರೆ.
ಅವರ ಸೇವೆ ಪರಿಗಣಿಸಿ ಅತ್ಯುನ್ನತ ನಾಗರಿಕ ಪ್ರಶಸ್ತಿ ಪ್ರಕಟಿಸಲಾಗಿದೆ.



- **ಅತಿ ಭಾರವಾದ ಉಪಗ್ರಹಗಳನ್ನು ಯಶಸ್ವಿಯಾಗಿ ಉಡಾವಣೆ ಮಾಡಿದ ಹೆಮ್ಮೆಗೆ ಪಾತ್ರವಾದ ಭಾರತೀಯ ಬಾಹ್ಯಾಕಾಶ ಸಂಶೋಧನ ಸಂಸ್ಥೆ ಇಸ್ರೋ ಇದೀಗ ಅಮೆರಿಕದ 9 ಉಪಗ್ರಹಗಳ ಉಡಾವಣೆಯ ಗುತ್ತಿಗೆ ಪಡೆದುಕೊಂಡಿದೆ. ಪಿಎಸ್‌ಎಲ್‌ವಿ ಉಡಾಹಕವನ್ನು ಬಳಸಿಕೊಂಡು ಈ ಉಪಗ್ರಹಗಳನ್ನು ಉಡಾವಣೆ ಮಾಡಲಾಗುವುದೆಂದು ಇಸ್ರೋ ತಿಳಿಸಿದೆ. ಇಸ್ರೋ ಈಗಾಗಲೇ ತನ್ನ ವಿವಿಧ ಉಡಾಹಕಗಳನ್ನು ಬಳಸಿಕೊಂಡು ಸುಮಾರು 19 ರಾಷ್ಟ್ರಗಳ 45 ಉಪಗ್ರಹಗಳನ್ನು ಯಶಸ್ವಿಯಾಗಿ ಉಡಾವಣೆ ಮಾಡಿದೆ. ಪುನರ್ಬಳಕೆ ಮಾಡಬಹುದಾದ ಉಡಾಹಕಗಳನ್ನು ಬಳಸುವ ರಾಷ್ಟ್ರಗಳ ಸಾಲಿಗೆ ಸೇರ್ಪಡೆಗೊಳ್ಳುವ ನಿಟ್ಟಿನಲ್ಲಿ ಭಾರತ ದಿಟ್ಟ ಹೆಜ್ಜೆಯನ್ನಿಟ್ಟಿದೆ. ಈ ವರ್ಷದ ಕೊನೆಯಲ್ಲಿ ಮೊಟ್ಟಮೊದಲ ಪುನರ್ಬಳಕೆ ಉಡಾಹಕದ ಪ್ರಾಯೋಗಿಕ ಹಾರಾಟ ನಡೆಸಲಾಗುವುದೆಂದು ತಿರುವನಂತಪುರದ ವಿಕ್ರಮ್ ಸಾರಾಭಾಯಿ ಬಾಹ್ಯಾಕಾಶ ಕೇಂದ್ರದ ನಿರ್ದೇಶಕ ಡಾ. ಕೆ. ಶಿವನ್ ತಿಳಿಸಿದ್ದಾರೆ.**

- ಸಂಸ್ಕೃತ ಭಾಷಾ ಕಾರ್ಯಕ್ರಮ ಮತ್ತು ಸುದ್ದಿ ಪ್ರಸಾರಕ್ಕಾಗಿ ದೇಶದಲ್ಲೇ ಮೊದಲ ಬಾರಿಗೆ ಪ್ರತ್ಯೇಕ ವಾಹಿನಿಯೊಂದನ್ನು ಆರಂಭಿಸಲು ಉತ್ತರಾಖಂಡ ಸರ್ಕಾರ ನಿರ್ಧರಿಸಿದೆ. ಉತ್ತರಾಖಂಡ ಮುಖ್ಯಮಂತ್ರಿ ಹರೀಶ್ ರಾವತ್ ಅಧ್ಯಕ್ಷತೆಯ ಉತ್ತರಾಖಂಡ್ ಸಂಸ್ಕೃತ ಅಕಾಡೆಮಿಯು ವಾಹಿನಿ ಆರಂಭಕ್ಕಾಗಿ ನೂರಕ್ಕೂ ಅಧಿಕ ಸಂಸ್ಕೃತ ವಿದ್ವಾಂಸರು, ದೇಶದ ವಿವಿಧೆಡೆಗಳಲ್ಲಿರುವ ಸಂಸ್ಕೃತ ವಿಶ್ವವಿದ್ಯಾಲಯಗಳ ಕುಲಪತಿಗಳು, ಸಂಸ್ಕೃತ ಕಾಲೇಜುಗಳ ಪ್ರಾಂಶುಪಾಲರ ಜೊತೆ ಮಾತುಕತೆ ನಡೆಸಿ ವಿಸ್ತೃತ ಯೋಜನಾ ವರದಿಯೊಂದನ್ನು ಸಿದ್ಧಪಡಿಸಿದ್ದಾರೆ. ಉತ್ತರಾಖಂಡದಲ್ಲಿ ಸಂಸ್ಕೃತ 2ನೇ ಅಧಿಕೃತ ರಾಜ್ಯಭಾಷೆ ಎಂಬ ಮಾನ್ಯತೆ ಪಡೆದಿದೆ.



- **ತಿಮ್ಮಪ್ಪನ ಸನ್ನಿಧಾನದಲ್ಲಿ ಪ್ರಸಾದವಾಗಿ ಲಡ್ಡು ವಿತರಿಸುವ ಸಂಪ್ರದಾಯ ಆರಂಭವಾಗಿ ಈಗ 300 ವರ್ಷವಾಗಿದೆ. ವಿಶ್ವದಲ್ಲಿಯೇ ಅತ್ಯಂತ ರುಚಿಕರ ಪ್ರಸಾದವಾದ ಈ ಲಡ್ಡು ಪ್ರಸಾದ ನೀಡುವ ಸಂಪ್ರದಾಯ 1715ರ ಆ. 2ರಂದು ಮೊದಲ ಬಾರಿಗೆ ತಿರುಪತಿಯಲ್ಲಿ ಆರಂಭವಾಯಿತು. ಭಕ್ತರಿಂದ ಭಾರಿ ಮೆಚ್ಚುಗೆ ವ್ಯಕ್ತವಾದ ಹಿನ್ನೆಲೆಯಲ್ಲಿ ಇಂದಿಗೂ ಮುಂದುವರಿದುಕೊಂಡು ಬಂದಿದೆ. ತಿರುಪತಿಗೆ ಪ್ರತಿ ವರ್ಷ ಕೋಟ್ಯಂತರ ರೂ. ಆದಾಯ ಈ ಲಡ್ಡುಗಳಿಂದ ಬರುತ್ತಿದೆ. ದೇಗುಲಕ್ಕೆ ಅರ್ಚಕರ ಕೊರತೆ ಎದುರಾದಾಗ, ಶ್ರೀ ವೈಷ್ಣವ ಅರ್ಚಕರಿಗೆ ದೇವಾಲಯದ ಪ್ರಸಾದದಿಂದ ಬರುವ ಆದಾಯದಲ್ಲಿ ಪಾಲು ನೀಡುವ ಘೋಷಣೆಯನ್ನು ಅಂದು ದೇಗುಲದ ಉಸ್ತುವಾರಿ ಹೊತ್ತಿದ್ದ ಮಹಾಂತರು ಮಾಡಿದರು. ಇದಾದ ನಂತರ ಪ್ರಸಾದ ವಿತರಣೆ ಅಧಿಕಾರ ಪಡೆದ ಅರ್ಚಕರು 1715ರಲ್ಲಿ ಸ್ವಾದಿಷ್ಟ ಲಡ್ಡು ವಿತರಣೆ ಆರಂಭಿಸಿದರು. ಕಲ್ಯಾಣ ಅಯ್ಯಂಗಾರ್ ತಿರುಪತಿ ಲಡ್ಡುವಿನ ಸೃಷ್ಟಿಕರ್ತ. ಇಂದು ತಿರುಪತಿಯಲ್ಲಿ ಪ್ರತಿದಿನ 3 ಲಕ್ಷ ಲಡ್ಡು ಮಾರಾಟವಾಗುತ್ತಿವೆ.**




- ಕೂದಲು ಉದುರುವಿಕೆ ತಡೆಯುವ ಚಿಕಿತ್ಸೆಗಾಗಿ ಅರಶಿನ, ದೇವದಾರು ತೊಗಟೆ/ಚಕ್ಕೆ ಮತ್ತು ಹಸಿರು ಚಹಾ ಹೊಂದಿದ ವೈದ್ಯಕೀಯ ಮಿಶ್ರಣಕ್ಕೆ ಪೇಟೆಂಟ್ ಪಡೆಯುವ ಇಂಗ್ಲೆಂಡಿನ ಖ್ಯಾತ ಲ್ಯಾಬೋರೇಟರಿಯೊಂದರ ಯತ್ನವನ್ನು ತಡೆಯುವ ಮೂಲಕ ತನ್ನ ಪರಂಪರಾಗತ ಜ್ಞಾನವನ್ನು ರಕ್ಷಿಸಿಕೊಳ್ಳುವಲ್ಲಿ ಭಾರತ ಮಹತ್ವದ ಯಶಸ್ಸು ಸಾಧಿಸಿದೆ. ಗಿಡಮೂಲಿಕೆಗಳ ಸಾರ ಹೊಂದಿದ ಮೌತ್‌ವಾಶ್ ಫಾರ್ಮುಲಾಕ್ಕೆ ಪೇಟೆಂಟ್ ಪಡೆಯಲು ಅಮೆರಿಕ ಮೂಲದ ಗ್ರಾಹಕ ವಸ್ತುಗಳ ದೈತ್ಯ ಕಾಲ್ಗೇಟ್–ಪಾಮೋಲಿವ್ ನಡೆಸಿದ್ದ ಇಂತಹುದೇ ಯತ್ನವನ್ನು ವಿಫಲಗೊಳಿಸಿದ ಬೆನ್ನಲ್ಲೇ ಭಾರತಕ್ಕೆ ಈ ಯಶಸ್ಸು ಪ್ರಾಪ್ತವಾಗಿದೆ. ವಿಜ್ಞಾನ ಮತ್ತು ಕೈಗಾರಿಕಾ ಸಂಶೋಧನ ಮಂಡಳಿ(ಸಿಎಸ್‌ಐಆರ್)ಯ ಪರಂಪರಾಗತ ಜ್ಞಾನದ ಡಿಜಿಟಲ್ ಲೈಬ್ರೆರಿ(ಟಿಕೆಡಿಎಲ್) ವಹಿಸಿದ್ದ ನಿರಂತರ ಜಾಗೃತಿಯು ಈ ನಿಟ್ಟಿನಲ್ಲಿ ಭಾರತಕ್ಕೆ ನೆರವಾಗಿದೆ. ಐರೋಪ್ಯ ಪೇಟೆಂಟ್ ಕಚೇರಿಗೆ ಮಂಡಳಿಯು ಸಲ್ಲಿಸಿದ ಪತ್ರವು ಭಾರತದ ಪ್ರಾಚೀನ ವೈದ್ಯಕೀಯ ವ್ಯವಸ್ಥೆಗಳಾದ ಆಯುರ್ವೇದ ಮತ್ತು ಯುನಾನಿ ಪದ್ಧತಿಗಳಲ್ಲಿ ಪುರಾತನ ಕಾಲದಿಂದಲೇ ಕೂದಲು ನಷ್ಟಕ್ಕೆ ಚಿಕಿತ್ಸೆ ನೀಡಲು ಅರಶಿನ, ದೇವದಾರು ತೊಗಟೆ/ಚಕ್ಕೆ ಮತ್ತು ಹಸಿರು ಚಹಾ ಬಳಸಲಾಗುತ್ತಿತ್ತು ಎಂಬುದನ್ನು ಸಾಬೀತುಪಡಿಸಿದೆ. ಆಯುರ್ವೇದ, ಯುನಾನಿ, ಸಿದ್ಧ ಮತ್ತು ಯೋಗ ಇತ್ಯಾದಿ ಭಾರತದ ಪ್ರಾಚೀನ ವೈದ್ಯಕೀಯ ವ್ಯವಸ್ಥೆಯಲ್ಲಿ ಬಳಸಲಾಗುತ್ತಿದ್ದ 25,000ಕ್ಕೂ ಹೆಚ್ಚು ಗಿಡಮೂಲಿಕೆಗಳನ್ನು ಪಟ್ಟಿ ಮಾಡಿರುವ ಟಿಕೆಡಿಎಲ್, ರಾಷ್ಟ್ರದ ಈ ಪರಂಪಾರಗತ ವೈದ್ಯಕೀಯ ಜ್ಞಾನವು ಅಂತಾರಾಷ್ಟ್ರೀಯ ಪೇಟೆಂಟ್ ಕಚೇರಿಗಳಲ್ಲಿ ದುರುಪಯೋಗವಾಗದಂತೆ ನಿಗಾ ಇಟ್ಟು ಕಾರ್ಯ ನಿರ್ವಹಿಸುತ್ತಿದೆ.

- **ವಿಶ್ವದ ಅತ್ಯಂತ ಕಗ್ಗಂಟಿನ ಸಮಸ್ಯೆ ಎಂದೇ ಪರಿಗಣಿಸಲ್ಪಟ್ಟಿದ್ದ ಭಾರತ– ಬಂಗ್ಲಾ ಗಡಿ ಸಮಸ್ಯೆಗೆ ಅಧಿಕೃತ ಪರಿಹಾರ ದೊರಕಿದೆ. ಪರ ದೇಶದ ಗಡಿಯಿಂದ ಸುತ್ತುವರಿದಿರುವ ಬಂಗ್ಲಾದಲ್ಲಿರುವ ಭಾರತದ 111 ಹಾಗೂ ಭಾರತದಲ್ಲಿರುವ ಬಂಗ್ಲಾದ 51 ಪ್ರದೇಶಗಳ ಬಗೆಗಿನ ಗೊಂದಲ ಬಗೆಹರಿದಿದೆ. 1947ರಲ್ಲಿ ಭಾರತ ಸ್ವತಂತ್ರವಾದ ಸಂದರ್ಭದಲ್ಲಿ ಎಲ್ಲ ಪ್ರದೇಶಗಳು ಭಾರತ ಮತ್ತು ಪಾಕಿಸ್ತಾನದ ನಡುವೆ ವಿಂಗಡಣೆಯಾದರೂ ಈ 162 ಹಳ್ಳಿಗಳ ವಿಷಯ ಮಾತ್ರ ಬಗೆಹರಿದಿರಲಿಲ್ಲ. ಹೀಗಾಗಿ ಇಲ್ಲಿ ನೆಲೆಸಿರುವ ನಾಗರಿಕರಿಗೆ ಅಧಿಕೃತವಾಗಿ ಯಾವ ದೇಶದ ಪೌರತ್ವವೂ ಸಿಕ್ಕಿರಲಿಲ್ಲ. ಜೂನ್‌ನಲ್ಲಿ ಪ್ರಧಾನಿ ನರೇಂದ್ರ ಮೋದಿ ಢಾಕಾಗೆ ಭೇಟಿ ನೀಡಿದ್ದ ಸಂದರ್ಭ ಒಪ್ಪಂದಕ್ಕೆ ಅಂಕಿತ ಹಾಕಿದ್ದರು. ಈ ಒಪ್ಪಂದದ ಪ್ರಕಾರ ಬಂಗ್ಲಾದೇಶದ 51 ಹಳ್ಳಿಗಳು ಭಾರತದ ವ್ಯಾಪ್ತಿಗೆ ಬಂದಿದ್ದು 14,000 ಜನರಿಗೆ ಭಾರತೀಯ ಪೌರತ್ವ ದೊರಕಿದೆ. 162 ಹಳ್ಳಿಗಳ ಜನರಿಗೆ ಅಧಿಕೃತ ಪೌರತ್ವ ದೊರಕಿರುವ ಹಿನ್ನೆಲೆಯಲ್ಲಿ ಶಾಲೆ, ಆಸ್ಪತ್ರೆ ಮತ್ತಿತರ ಮೂಲಭೂತ ಸೌಲಭ್ಯಗಳನ್ನು ಪಡೆಯಲು ಅನುಕೂಲವಾಗಲಿದೆ. ಆದರೆ ಬಂಗ್ಲಾಕ್ಕೆ ಸೇರಿರುವ ಭಾರತದ 111 ಹಳ್ಳಿಗಳ ಒಂದಿಷ್ಟು ನಾಗರಿಕರಿಗೆ ಬಂಗ್ಲಾ ಪೌರತ್ವ ಪಡೆಯುವುದು ಇಷ್ಟವಿಲ್ಲ. ಈ ಪೈಕಿ 979 ಮಂದಿ ಭಾರತದ ಪೌರತ್ವಕ್ಕೆ ಅರ್ಜಿ ಸಲ್ಲಿಸಿದ್ದು ಇವರಲ್ಲಿ 169 ಮುಸ್ಲಿಮರೂ ಇದ್ದಾರೆ. ಇವರಿಗೆ ನವೆಂಬರ್ ಬಳಿಕ ಪೌರತ್ವ ನೀಡಲು ಕೇಂದ್ರ ಸರ್ಕಾರ ನಿರ್ಧರಿಸಿದೆ.**




- ವಿಶ್ವದ ಅತೀ ಎತ್ತರದ ಯುದ್ಧ ಭೂಮಿ ಎಂದೇ ಕರೆಯಿಸಿಕೊಂಡಿರುವ ಸಿಯಾಚಿನ್ ಯುದ್ಧ ಭೂಮಿಯಲ್ಲಿ 2012ರಿಂದ 2015ರ ಜುಲೈ 24 ವರೆಗೆ (ನಾಲ್ಕು ವರ್ಷಗಳಲ್ಲಿ) 33 ಭಾರತೀಯ ಯೋಧರು ಮೃತಪಟ್ಟಿದ್ದಾರೆ ಎಂದು ಕೇಂದ್ರ ಸರ್ಕಾರ ತಿಳಿಸಿದೆ. 2012ರಲ್ಲಿ 12, 2013ರಲ್ಲಿ 10, 2014ರಲ್ಲಿ 6 ಹಾಗೂ ಪ್ರಸಕ್ತ ವರ್ಷ ಜುಲೈವರೆಗೆ ಐವರು ಯೋಧರು ಮೃತಪಟ್ಟಿದ್ದಾರೆ ಎಂದು ಕೇಂದ್ರ ರಕ್ಷಣಾ ಸಚಿವ ಮನೋಹರ್ ಪರಿಕರ್ ತಿಳಿಸಿದ್ದಾರೆ.



- **ಪ್ರಧಾನಿ ನರೇಂದ್ರ ಮೋದಿ ನವೆಂಬರ್‌ನಲ್ಲಿ ಇಂಗ್ಲೆಂಡ್ ಪ್ರವಾಸ ಕೈಗೊಳ್ಳಲಿದ್ದು, ಈ ವೇಳೆ ವಿಶ್ವವಿಖ್ಯಾತ ಕೊಹಿನೂರ್ ವಜ್ರವನ್ನು ಭಾರತಕ್ಕೆ ಹಿಂದಿರುಗಿಸಿ ಎಂದು ಭಾರತೀಯ ಮೂಲದ ಬ್ರಿಟಿಷ್ ಸಂಸದೆ ಕೀತ್ ವಾಜ್ ಇಂಗ್ಲೆಂಡ್ ಸರ್ಕಾರಕ್ಕೆ ಸಲಹೆ ನೀಡಿದ್ದಾರೆ. ಇತ್ತೀಚೆಗೆ ಕಾಂಗ್ರೆಸ್ ಸಂಸದ ಶಶಿ ತರೂರ್ ಆಕ್ಸ್‌ಫರ್ಡ್‌ನಲ್ಲಿ ಮಾಡಿದ ಭಾಷಣದಲ್ಲಿ ಬ್ರಿಟಿಷರ 200 ವರ್ಷಗಳ ವಸಾಹತುಶಾಹಿ ಆಡಳಿತದಿಂದಾಗಿ ಭಾರತಕ್ಕಾದ ನಷ್ಟವನ್ನು ತುಂಬಿ ಕೊಡಬೇಕೆಂದು ಹೇಳಿದ್ದರು. ಇದಕ್ಕೆ ಕೀತ್ ವಾಜ್ ಬೆಂಬಲ ಸೂಚಿಸಿದ್ದು, ಮೋದಿ ಭೇಟಿ ವೇಳೆ ಕೊಹಿನೂರನ್ನು ಕೊಡುಗೆಯಾಗಿ ನೀಡಿದರೆ ಅದು ಎಂತಹ ಮಧುರ ಕ್ಷಣವಾಗಿರುತ್ತದೆ ಎಂದಿದ್ದಾರೆ. ಕೊಹಿನೂರ್ ವಜ್ರ ಆಂಧ್ರದ ಗುಂಟೂರು ಜಿಲ್ಲೆಯಲ್ಲಿರುವ ಕೊಲ್ಲೂರು ಗಣಿಯಲ್ಲಿ ಸಿಕ್ಕಿತ್ತು. ಕಾಕತೀಯ ಆಸ್ಥಾನದಲ್ಲಿದ್ದ ಈ ವಜ್ರ ನಂತರ ಬ್ರಿಟಿಷರ ಕೈತಲುಪಿತ್ತು. ಸದ್ಯ ರಾಣಿ ಎರಡನೇ ಎಲಿಜಬೆತ್‌ರ ಕಿರೀಟದಲ್ಲಿ ಇದನ್ನು ಅಳವಡಿಸಲಾಗಿದೆ.**

- ಸುಮಾರು 13 ವರ್ಷಗಳ ಹಿಂದೆ ಗೋಧ್ರಾದಲ್ಲಿ ಸಾಬರಮತಿ ಎಕ್ಸ್‌ಪ್ರೆಸ್ ರೈಲಿಗೆ ಬೆಂಕಿ ಹಚ್ಚಿದ್ದ ಪ್ರಕರಣಕ್ಕೆ ಸಂಬಂಧಿಸಿದಂತೆ ಆರೋಪಿ ಕಸಂ ಇಬ್ರಾಹಿಂ ಬಹ್ಮೇದಿ ಎಂಬಾತನನ್ನು ಗುಜರಾತ್‌ನ ಉಗ್ರಹ ನಿಗ್ರಹ ಪಡೆ ಬಂಧಿಸಿದೆ. ಗೋಧ್ರಾದ ರಗಾಡಿಯಾದ ನಿವಾಸಿಯಾಗಿದ್ದ ಕಸಂ ಸಾಬರಮತಿ ಎಕ್ಸ್‌ಪ್ರೆಸ್ ರೈಲಿಗೆ ಬೆಂಕಿ ಹಚ್ಚಿ ಪರಾರಿಯಾಗಿದ್ದ. ರಾಷ್ಟ್ರದ ನಾನಾ ಭಾಗಗಳಿಗೆ ತೆರಳಿ ನಕಲಿ ಹೆಸರು ಬಳಸಿಕೊಂಡು ಬಂಧನದಿಂದ ಪಾರಾಗಿದ್ದ. ಈತ ಕೆಲವು ದಿನಗಳ ಹಿಂದೆ ಧಾರ್ಮಿಕ ಗುಂಪಿನೊಂದಿಗೆ ಮಧ್ಯಪ್ರದೇಶದಲ್ಲಿರುವ ಬಗ್ಗೆ ಹಾಗೂ ಅಲ್ಲಿಂದ ಆತ ತವರಿಗೆ ಮರಳುವ ಬಗ್ಗೆ ಮಾಹಿತಿ ಪಡೆದುಕೊಂಡಿದ್ದ ಉಗ್ರರ ನಿಗ್ರಹ ಪಡೆ ಸಿಬ್ಬಂದಿ ಆಗಸ್ಟ್ 3ರಂದು ದಾಹೂಡ್ ರೈಲ್ವೆ ನಿಲ್ದಾಣದಲ್ಲಿ ಆತನನ್ನು ಬಂಧಿಸಿದರು. ಈ ಪ್ರಕರಣದಲ್ಲಿ ಭಾಗಿಯಾಗಿ ತಲೆಮರೆಸಿಕೊಂಡಿದ್ದ ಮೂವರು ಆರೋಪಿಗಳನ್ನು ಒಂದೇ ತಿಂಗಳ ಅವಧಿಯಲ್ಲಿ ಬಂಧಿಸಲಾಗಿದೆ.



- **ಮಾಜಿ ರಾಷ್ಟ್ರಪತಿ ಎಪಿಜೆ ಅಬ್ದುಲ್ ಕಲಾಂ ಅವರ ಸ್ಮರಣಾರ್ಥ ಕಲಾಂ ಜನ್ಮದಿನವಾದ ಅಕ್ಟೋಬರ್ 15 ಅನ್ನು 'ಯುವ ಪ್ರೇರಣೆ'ಯ ದಿನವಾಗಿ ಆಚರಿಸಲು ತಮಿಳುನಾಡು ಸರ್ಕಾರ ನಿರ್ಧರಿಸಿದೆ. ಈ ಕುರಿತು ಆದೇಶ ಹೊರಡಿಸಿರುವ ತಮಿಳುನಾಡು ಸರ್ಕಾರ, ರಾಜ್ಯದಲ್ಲಿ ವಿಜ್ಞಾನದ ಬೆಳವಣಿಗೆ, ವಿದ್ಯಾರ್ಥಿಗಳ ಕ್ಷೇಮಾಭಿವೃದ್ಧಿ, ಮಾನವೀಯತೆಗಾಗಿ ದುಡಿದ ವ್ಯಕ್ತಿಗಳಿಗೆ ಅಬ್ದುಲ್ ಕಲಾಂ ಅವರ ಹೆಸರಿನಲ್ಲಿ 'ಎ.ಪಿ.ಜೆ. ಅಬ್ದುಲ್ ಕಲಾಂ ಪ್ರಶಸ್ತಿ' ನೀಡಲಾಗುವುದು. ಪ್ರಶಸ್ತಿಯು ರೂ. 5 ಲಕ್ಷ ನಗದು ಹಾಗೂ 8 ಗ್ರಾಂ ಚಿನ್ನದ ಪದಕ ಒಳಗೊಂಡಿದೆ. ಸ್ವಾತಂತ್ರ್ಯ ದಿನಾಚರಣೆ ಕಾರ್ಯಕ್ರಮದಲ್ಲಿ ಈ ವರ್ಷದ ಪ್ರಶಸ್ತಿ ಪ್ರದಾನ ಮಾಡಲಾಗುವುದು ಎಂದು ಜಯಲಲಿತಾ ತಿಳಿಸಿದ್ದಾರೆ.**




- ಅಂತಾರಾಷ್ಟ್ರೀಯ ಯೋಗ ದಿನಾಚರಣೆಯ ಗೌರವಾರ್ಥ ರಿಸರ್ವ್ ಬ್ಯಾಂಕ್ ಆಫ್ ಇಂಡಿಯಾ 10 ರೂ. ಮುಖಬೆಲೆಯ ಹೊಸ ನಾಣ್ಯವನ್ನು ಬಿಡುಗಡೆ ಮಾಡುವುದಾಗಿ ತಿಳಿಸಿದೆ. ನಾಣ್ಯ ಒಂದು ಬದಿಯಲ್ಲಿ ಅಶೋಕಸ್ತಂಭದ ಲಾಂಛನ, ಸಂಸ್ಕೃತದಲ್ಲಿ 'ಸತ್ಯಮೇವ ಜಯತೇ' ಘೋಷವಾಕ್ಯ ಹಾಗೂ ರೂಪಾಯಿ ಚಿಹ್ನೆಯನ್ನು ಒಳಗೊಳ್ಳಲಿದೆ. ಮತ್ತೊಂದು ಬದಿಯಲ್ಲಿ ಅಂತಾರಾಷ್ಟ್ರೀಯ ಯೋಗ ದಿನಾಚರಣೆಯ ಲಾಂಛನ, ಲಾಂಛನದ ಕೆಳಭಾಗದಲ್ಲಿ '21 ಜೂನ್', 'ಸಮಾಜಸ್ಯ ಏವಮ್ ಶಾಂತಿ ಕೆಲಿಯೆ ಯೋಗ್' ಮತ್ತು 'ಯೋಗ ಫಾರ್ ಹಾರ್ಮನಿ ಆ್ಯಂಡ್ ಪೀಸ್' ಎಂಬ ಘೋಷವಾಕ್ಯಗಳು ಇರಲಿವೆ.

- **ಎಷ್ಟೇ ಕಠಿಣ ನಿಯಮಗಳನ್ನು ಸರಕಾರ ವಿಧಿಸಿದರೂ ದೇಶದಲ್ಲಿ ಪ್ಲಾಸ್ಟಿಕ್ ಬಳಕೆ ನಿಯಂತ್ರಣಕ್ಕೆ ಬರುತ್ತಿಲ್ಲ. ಪ್ರತಿನಿತ್ಯ ದೇಶದ 60 ಪ್ರಮುಖ ನಗರಗಳಿಂದ 3,500 ಟನ್ ಪ್ಲಾಸ್ಟಿಕ್ ತ್ಯಾಜ್ಯ ಉತ್ಪತ್ತಿಯಾಗುತ್ತಿದೆ. ಅದರಲ್ಲೂ ಬೆಂಗಳೂರು, ದಿಲ್ಲಿ, ಮುಂಬಯಿ, ಚೆನ್ನೈ, ಕೋಲ್ಕತ್ತಾ, ಅಹಮದಾಬಾದ್, ಹೈದರಾಬಾದ್ ನಗರಗಳಿಂದ ಅತಿ ಹೆಚ್ಚು ಪ್ಲಾಸ್ಟಿಕ್ ತ್ಯಾಜ್ಯ ಸಂಗ್ರಹವಾಗುತ್ತಿದೆ. ಇದನ್ನು ವೈಜ್ಞಾನಿಕ ರೀತಿಯಲ್ಲಿ ವಿಲೇವಾರಿ ಮಾಡದೇ ಹೋದಲ್ಲಿ ಪರಿಸರಕ್ಕೆ ದೊಡ್ಡ ಪ್ರಮಾಣದಲ್ಲಿ ಹಾನಿಯಾಗುತ್ತದೆ. ಹೀಗಾಗಿ ಪ್ಲಾಸ್ಟಿಕ್ ಹಾವಳಿ ತಡೆ ಸಂಬಂಧ ಅನೇಕ ಸಮಿತಿಗಳು ನೀಡಿರುವ ವರದಿಗಳ ಅನುಷ್ಠಾನಕ್ಕೆ ಸರಕಾರ ಯತ್ನಿಸುತ್ತಿದೆ ಎಂದು ಕೇಂದ್ರ ಪರಿಸರ ಸಚಿವರು ತಿಳಿಸಿದ್ದಾರೆ.**



- ಶಿರಡಿ ಸಾಯಿಬಾಬಾ ಅವರ ಜನಪ್ರಿಯತೆ ದಿನದಿಂದ ದಿನಕ್ಕೆ ವಿಶ್ವವ್ಯಾಪಿಯಾಗುತ್ತಿದೆ. ಇದಕ್ಕೆ ನಿದರ್ಶನವೆಂಬಂತೆ ಗುರುಪೂರ್ಣಿಮ ಅಂಗವಾಗಿ ಶಿರಡಿ ಸಾಯಿಬಾಬಾ ಚಿತ್ರವನ್ನೊಳಗೊಂಡ ಬೆಳ್ಳಿಯ ನಾಣ್ಯವನ್ನು ನಿಯೂ ದ್ವೀಪ ರಾಷ್ಟ್ರದಲ್ಲಿ ಬಿಡುಗಡೆ ಮಾಡಲಾಗಿದೆ. ಬಾಬಾ ಚಿತ್ರ ಒಳಗೊಂಡ ಅಧಿಕೃತ ನಾಣ್ಯ ಬಿಡುಗಡೆ ಮಾಡಿರುವುದು ವಿಶ್ವದಲ್ಲೇ ಇದೇ ಮೊದಲು. ಅಪ್ಪಟ ಬೆಳ್ಳಿಯಿಂದ ತಯಾರಿಸಲಾದ ಈ ನಾಣ್ಯವನ್ನು ಸ್ವಿಟ್ಜರ್‌ಲೆಂಡ್ ಮೂಲದ ಹೆಲ್ವಿಕ್ ಮಿಂಟ್ ಸಂಸ್ಥೆ ಟಂಕಿಸಿದೆ ಎಂದು ಸೇವಕ್ ಹಾಬಿ ಸಂಘಟನೆಯ ವಕ್ತಾರ ರವಿ ಸೇವಕ್ ಹೇಳಿದ್ದಾರೆ. 31.1 ಗ್ರಾಂ ತೂಕವಿರುವ ಕೇವಲ 501 ನಾಣ್ಯಗಳನ್ನಷ್ಟೇ ಆರಂಭಿಕವಾಗಿ ಮಾರುಕಟ್ಟೆಗೆ ಬಿಡುಗಡೆ ಮಾಡಲಾಗಿದೆ.

पुंगव PUNGAVA
# 74, Ranga Rao Road,
Shankarapuram, Bangalore - 560 004.
website : www.samvada.org
ತ್ರೈವಾರ್ಷಿಕ ಚಂದಾ : ರೂ. 150.00

REGISTERED NEWS PAPER RNI 36528/79 LICENCED TO POST WITHOUT PREPAYMENT-WPP46 AT BENGALURU PSO, BG-560 026 on 10/25 of every Month REG.NO.CPMG/KA/BGS/102/2015-17
15-8-2015



# ಝಿರಿ ಎಂಬ ಸಂಸ್ಕೃತ ಗ್ರಾಮ

ಆದಿ ಶಂಕರಾಚಾರ್ಯರು ಜ್ಞಾನವನ್ನರಸುತ್ತ ಸಮಗ್ರ ಭಾರತ ಪರ್ಯಟನವನ್ನು ಕೈಗೊಂಡು ನರ್ಮದಾ ನದೀತೀರಕ್ಕೆ ಬರುತ್ತಾರೆ. ಅಲ್ಲಿಯ ದಾರಿಹೋಕನೊಬ್ಬನಲ್ಲಿ 'ಇಲ್ಲಿ ಮಂಡನಮಿಶ್ರರ ಮನೆಯೆಲ್ಲಿ?' ಎಂದು ಕೇಳುತ್ತಾರೆ. ಅದಕ್ಕುತ್ತರವಾಗಿ ಆ ದಾರಿಹೋಕನು, 'ಯಾವ ಮನೆಯ ಮುಂದೆ ಕುಳಿತ ಶುಕಸಾರಿಕೆಯರು (ಗಿಳಿಗಳು) ಬ್ರಹ್ಮ ಸತ್ಯಂ ಜಗನ್ಮಿಥ್ಯಾ (ಬ್ರಹ್ಮವೊಂದೇ ಸತ್ಯ, ಜಗತ್ತು ಮಿಥ್ಯೆ) ಎಂದು ಸದಾ ಚರ್ಚಿಸುತ್ತಿರುತ್ತವೆಯೋ ಅದೇ ಮಂಡನಮಿಶ್ರರ ಮನೆ' ಎಂದು ಹೇಳುತ್ತಾನೆ.

ಹಾಗೆಯೇ ಝಿರಿ ಎಂಬ ಊರಿನ ವಿಷಯವಾಗಿ ಯಾರಾದರೂ ಕೇಳಿದರೆ 'ಯಾವ ಗ್ರಾಮದಲ್ಲಿ ಕೃಷಿಕರು, ದನ ಕಾಯುವವರು, ಆಡುವ ಮಕ್ಕಳು, ಮಹಿಳೆಯರು, ಅಂಗಡಿಕಾರರು ಸಂಸ್ಕೃತದಲ್ಲಿಯೇ ತಮ್ಮ ದೈನಂದಿನ ವ್ಯವಹಾರಗಳನ್ನು ನಡೆಸುತ್ತಾರೋ ಆ ಗ್ರಾಮವೇ ಝಿರಿ' ಎಂದು ಹೇಳಬಹುದು.

ಈ ರೀತಿಯಾಗಿ ಕೆಲವು ತಿಂಗಳುಗಳ ಹಿಂದೆ ಅಂತಾರಾಷ್ಟ್ರಿಯ ಮಾಧ್ಯಮವೊಂದು ಸಂಸ್ಕೃತ ಗ್ರಾಮವೊಂದರ ವಿಷಯವಾಗಿ ಸಾಕ್ಷ್ಯಚಿತ್ರವನ್ನು ನಿರ್ಮಿಸಿ ಪ್ರಸಾರ ಮಾಡಿತು. ಇದನ್ನು ವೀಕ್ಷಿಸಿದ ಪ್ರತಿಯೊಬ್ಬರೂ ಆಶ್ಚರ್ಯಚಕಿತರಾದರು. ಸಂಸ್ಕೃತಭಾಷೆಯ ಯಾವುದೇ ಪೂರ್ವಸಂಪರ್ಕ, ಪೂರ್ವ ಪರಿಚಯವಿಲ್ಲದ ಕುಗ್ರಾಮವೊಂದು ಸಂಸ್ಕೃತ ಭಾಷೆಯನ್ನು ತನ್ನ ವ್ಯಾವಹಾರಿಕ ಭಾಷೆಯನ್ನಾಗಿಸಿಕೊಂಡು ವಿಶ್ವಸ್ತರದಲ್ಲಿ ತನ್ನನ್ನು ಗುರುತಿಸಿಕೊಂಡಿದೆ. ಅಲ್ಲಿನ ಪ್ರತಿಯೊಬ್ಬರೂ ತಾನು ಸಂಸ್ಕೃತ ಮಾತನಾಡಬಲ್ಲೆನೆಂದು ಎದೆತಟ್ಟಿ, ಎದೆಯುಬ್ಬಿಸಿ ಅಭಿಮಾನದಿಂದ ಹೇಳುವಂತಾದ ಈ ಊರಿನ ಯಶೋಗಾಥೆ ಎಲ್ಲರಿಗೂ ಪ್ರೇರಕವಾಗಿ ನಿಂತಿದೆ.

## ಎಲ್ಲಿದೆ?

ಸಂಸ್ಕೃತಭಾಷೆಯ ಅಭಿಜ್ಞಾನದಿಂದ ತನ್ನನ್ನು ವಿಶ್ವಮಟ್ಟದಲ್ಲಿ ಗುರುತಿಸಿಕೊಂಡ ಈ ಗ್ರಾಮ ಮಧ್ಯಪ್ರದೇಶದ ರಾಜಘರ್ ಜಿಲ್ಲೆಯಲ್ಲಿದೆ. ಮಧ್ಯಪ್ರದೇಶದ ಉಜ್ಜಯಿನಿಯಿಂದ ಸುಮಾರು ಮೂರು ಗಂಟೆ ಪ್ರಯಾಣದ ದೂರದಲ್ಲಿದೆ. ಇಂದೋರ್‌ನಿಂದ 150 ಕಿ.ಮೀ. ದೂರ. ಈ ಊರಿನ ಜನರ ಮೂಲ ಆಡುಭಾಷೆ ಮಾಲವಿ. 1,300ಕ್ಕೂ ಹೆಚ್ಚಿನ ಸಂಖ್ಯೆಯಲ್ಲಿರುವ ಈ ಗ್ರಾಮಸ್ಥರ ಮುಖ್ಯ ಕಸುಬು ಕೃಷಿ, ಹೈನುಗಾರಿಕೆ. ಇನ್ನು ಕೆಲವರು ಕೂಲಿ ಮಾಡಿ ಜೀವನ ನಡೆಸುತ್ತಾರೆ.

## ಏನಿದರ ಯಶೋಗಾಥೆ?

ಒಬ್ಬ ಸಾಮಾನ್ಯವರ್ಗದ ಮಹಿಳೆ ತನ್ನ ದೃಢಸಂಕಲ್ಪ ಶಕ್ತಿಯಿಂದ ಇಡೀ ಗ್ರಾಮವನ್ನೇ ಪರಿವರ್ತನೆ ಮಾಡಿದ ಯಶೋಗಾಥೆಯಿದು. ಸುಮಾರು ಹತ್ತು ವರ್ಷಗಳ ಹಿಂದೆ 'ಸಂಸ್ಕೃತ ಭಾರತಿ'ಯ ವತಿಯಿಂದ ದೆಹಲಿಯಲ್ಲೊಂದು ಸಂಸ್ಕೃತ ಪ್ರಶಿಕ್ಷಣವರ್ಗ ಆಯೋಜನೆಗೊಂಡಿತ್ತು. ನೂರಾರು ಜನ ಪ್ರಶಿಕ್ಷಣ ವರ್ಗದಲ್ಲಿ ಪಾಲ್ಗೊಂಡಿದ್ದರು. ಅವರಲ್ಲಿ ವಿಮಲಾ ಪನ್ನಾ ಎಂಬ ಮಹಿಳೆಯೂ ಒಬ್ಬರು. ಸಂಸ್ಕೃತ ಭಾಷೆಯ ಗಂಧವೇ ಇಲ್ಲದ ಆ ಮಹಿಳೆ 21 ದಿನಗಳ ಪ್ರಶಿಕ್ಷಣದ ನಂತರ ತನ್ನ ಸಹ ಕಾರ್ಯಕರ್ತ ಬಾಲಪ್ರಸಾದರೊಂದಿಗೆ ಝಿರಿ ಗ್ರಾಮಕ್ಕೆ ಬಂದು ಆ ಗ್ರಾಮವನ್ನು ಸಂಸ್ಕೃತಗ್ರಾಮವನ್ನಾಗಿ ಮಾಡಬೇಕೆಂದು ಸಂಕಲ್ಪ ಸ್ವೀಕರಿಸಿದರು. ಅವರ ಸಂಕಲ್ಪ ಶಕ್ತಿ ಎಷ್ಟು ದೃಢವಾಗಿತ್ತೆಂದರೆ ಕೇವಲ ಕೆಲವೇ ವರ್ಷಗಳಲ್ಲಿ 150ಕ್ಕೂ ಹೆಚ್ಚು ಮನೆಗಳಿರುವ ಆ ಗ್ರಾಮವು ಸಂಸ್ಕೃತ ಗ್ರಾಮವಾಗಿ ಪರಿವರ್ತಿತವಾಯಿತು! ಈಗ ಅಲ್ಲಿನ ಗ್ರಾಮಸ್ಥರು, ಪಶುಪಾಲಕರು, ಕೂಲಿಕಾರ್ಮಿಕರಾದಿಯಾಗಿ ಎಲ್ಲರೂ ಸಂಸ್ಕೃತಸಂಭಾಷಣೆಯಲ್ಲಿ ಚತುರರು. ಅನಕ್ಷರಸ್ಥರೇ ಅಧಿಕ ಸಂಖ್ಯೆಯಲ್ಲಿರುವ ಅದರಲ್ಲೂ ವಿಶೇಷವಾಗಿ ಹಿಂದುಳಿದ ಪರಿವಾರದವರೇ ಹೆಚ್ಚಾಗಿ ವಾಸಿಸುವ ಈ ಊರು ಇಂದು ಸಂಪೂರ್ಣ ಸಂಸ್ಕೃತಗ್ರಾಮ.

ಸಹಜವಾಗಿಯೇ ಹಳ್ಳಿಯೆಂದರೆ ಗುಂಪುಗಾರಿಕೆ, ಜಗಳ, ಅಂತಃಕಲಹ, ಪರಸ್ಪರ ದ್ವೇಷ, ಮದ್ಯಪಾನ, ಜೂಜಾಟಗಳು ಎಗ್ಗಿಲ್ಲದೆ ನಡೆಯುತ್ತಿರುತ್ತವೆ. ಝಿರಿ ಗ್ರಾಮ ಇವುಗಳಿಂದೇನೂ ಹೊರತಾಗಿರಲಿಲ್ಲ. ಆದರೆ ಹತ್ತು ವರ್ಷಗಳ ಹಿಂದಿನ ಈ ಪರಿಸ್ಥಿತಿ ಇಂದು ಸಂಪೂರ್ಣ ಬದಲಾಗಿದೆ. ಇಡೀ ಗ್ರಾಮವೇ ಏಕತೆಯ ಮಂತ್ರ ಪಠಿಸುತ್ತಿದೆ. ಪ್ರಗತಿಯ ಮಾತಾಡುತ್ತಿದೆ. 'ವಸುಧೈವ ಕುಟುಂಬಕಮ್' ಎಂಬ ಸಂದೇಶವನ್ನು ಸಾರುತ್ತಿದೆ. ಗ್ರಾಮದ ಪ್ರತಿಯೊಬ್ಬರೂ ಪರಸ್ಪರ ಪ್ರೀತಿ ವಿಶ್ವಾಸಗಳಿಂದ ಜೀವನ ನಡೆಸುತ್ತಿದ್ದಾರೆ.

## ಸಂಸ್ಕೃತಮಯ

ಝಿರಿ ಊರಿನ ಎಲ್ಲ ದೈನಂದಿನ ಜೀವನದಲ್ಲಿ ಸಂಸ್ಕೃತಭಾಷೆಗೆ ವಿಶಿಷ್ಟ ಸ್ಥಾನ. ಮಕ್ಕಳು ಶಾಲೆಯಲ್ಲಿರಲಿ, ಹಿರಿಯರು ಪಂಚಾಯಿತಿ ಕಟ್ಟೆ ಸೇರಿರಲಿ, ಎಲ್ಲೋ ಮರದ ನೆರಳಲ್ಲಿ ಗುಂಪು ಚರ್ಚೆ ನಡೆದಿರಲಿ, ಇನ್ನೆಲ್ಲೋ ದೂರದ ದಾರಿಯಲ್ಲಿ ನಾಲ್ಕಾರು ಜನ ನಡೆದುಕೊಂಡು ಸಾಗಿರಲಿ, ಮಹಿಳೆಯರು ಹಾಲು ಕರೆಯುತ್ತಿರಲಿ – ಅಲ್ಲೆಲ್ಲ ಸಂಸ್ಕೃತ ಶಬ್ದಗಳು ಅನುರಣಿಸುತ್ತವೆ. ಹೀಗೆ ಇಲ್ಲಿ ಸಂಸ್ಕೃತ ಒಂದು ಸಹಜವಾದ, ಜನಜೀವನದ ಭಾಷೆಯಾಗಿ ಬದಲಾಗಿದೆ.

ಈ ಊರಿನ ಇನ್ನೊಂದು ವಿಶೇಷವೆಂದರೆ, ಮದುವೆಯಾಗಿ ಈ ಊರಿಗೆ ಹೊಸದಾಗಿ ಬರುವ ಸ್ತ್ರೀಯರಿಗೆ ಮೊದಲು ಸಂಸ್ಕೃತದಲ್ಲಿ ಮಾತನಾಡುವುದನ್ನು ಹೇಳಿಕೊಡಲಾಗುತ್ತದೆ. ಕೆಲವೇ ದಿನಗಳಲ್ಲಿ ಅವರು ಸಂಭಾಷಣ ಸಮರ್ಥರಾಗುತ್ತಾರೆ. ಹಾಗೆಯೇ ಇಲ್ಲಿನ ಹೆಣ್ಣುಮಕ್ಕಳು ಸುತ್ತಮುತ್ತಲ ಹಳ್ಳಿಗಳಿಗೆ ಮದುವೆಯಾಗಿ ಹೋದರೆ ಅಲ್ಲಿನ ಜನರಿಗೆ ಸಂಸ್ಕೃತವನ್ನು ಹೇಳಿಕೊಡುವ ಪ್ರಯತ್ನ ಮಾಡುತ್ತಾರೆ. ಒಟ್ಟಿನಲ್ಲಿ ಇಲ್ಲಿನ ಪ್ರತಿಯೊಬ್ಬರೂ ಸಂಸ್ಕೃತ ಪ್ರಚಾರಕಾರ್ಯದಲ್ಲಿ ತಮ್ಮನ್ನು ತೊಡಗಿಸಿಕೊಂಡಿದ್ದಾರೆ.

ಇದು ಸ್ವಾಮಿ ವಿವೇಕಾನಂದರಂತಹ ಮಹಾತ್ಮರು ಹೇಳಿದ ಸುಸಂಸ್ಕೃತ ಭಾರತ – ಸಮೃದ್ಧ ಭಾರತವೆಂಬ ಪರಿಕಲ್ಪನೆ ಇನ್ನು ಕೆಲವೇ ಸಮಯದಲ್ಲಿ ಸಾಕಾರಗೊಳ್ಳುವ ಸ್ಪಷ್ಟ ಸೂಚನೆಗಳೆಂದರೂ ತಪ್ಪಾಗದು. ಒಂದಾನೊಂದು ಕಾಲದಲ್ಲಿ ಬೆರಳೆಣಿಕೆಯಷ್ಟು ಇದ್ದ ಸಂಸ್ಕೃತಜ್ಞರ ಸಂಖ್ಯೆ ಇಂದು ಕೋಟಿಗೇರಿದೆ. 'ಸಂಸ್ಕೃತ ಭಾರತಿ'ಯಂತಹ ವಿಶ್ವವ್ಯಾಪೀ ಸಂಸ್ಥೆಯೊಂದರ ಅವಿರತ ಪರಿಶ್ರಮ ಇಂದು ಫಲ ನೀಡುತ್ತಿದೆ. ಸಂಸ್ಕೃತ ಭಾರತಿಯ ಕಾರ್ಯದಿಂದಾಗಿ ದೇಶದಲ್ಲಿ ಸಾವಿರಾರು ಮನೆಗಳು ಸಂಸ್ಕೃತಗೃಹಗಳಾಗಿ ಪರಿವರ್ತಿತವಾಗಿವೆ. ಐದು ಗ್ರಾಮಗಳು ಸಂಸ್ಕೃತಗ್ರಾಮಗಳಾಗಿವೆ. ಸಾವಿರಾರು ಸಂಖ್ಯೆಯಲ್ಲಿ ಸಂಸ್ಕೃತ ಕಾರ್ಯಕರ್ತರು ಸೇವೆಗಾಗಿ ತಮ್ಮ ಜೀವನವನ್ನು ಮುಡಿಪಾಗಿಟ್ಟಿದ್ದಾರೆ. ಜರ್ಮನಿಯಂತಹ ದೇಶಗಳು ಇಂದು ಸಂಸ್ಕೃತವನ್ನು ಒಪ್ಪಿ ಸ್ವೀಕರಿಸಿವೆ.

ವ್ಯಾಪಾರಿ ವಿಜ್ಞಾನವಿಷಯವಾಗಿ ಪದವಿ ಪಡೆದು ಸ್ವಂತ ವ್ಯಾಪಾರ ಘಟಕವೊಂದನ್ನು ಆರಂಭಿಸಿರುವ ಝಿರಿಯ ಮಹೇಂದ್ರ ಚೌಹಾನ್ ಅವರು ತಮ್ಮ ಊರಿನ ಬಗೆಗೆ ಹೇಳುವುದು ಹೀಗೆ: "ಮಹೋದಯ, ಅಸ್ಮಾಕಂ ಗ್ರಾಮೇ ಶತಾಧಿಕಾನಿ ಗೃಹಾಣಿ ಸಂತಿ । ತ್ರಿಶತಾಧಿಕ ಏಕಸಹಸ್ರಂ ಜನಾಃ ಸಂತಿ । ವಯಂ ಸರ್ವೇ ಅಪಿ ಸಂಸ್ಕೃತಸಂಭಾಷಣೇ ಸಮರ್ಥಾಃ । ಅತ್ರತ್ಯ ಬೋಲೀ ಮಾಲವೀ ಭಾಷಾ ಇತಿ । ಕಿಂತು ಇದಾನೀಂ ಸರ್ವೇ ಅಪಿ ಸಂಸ್ಕೃತೇನ ಏವ ಸಂಭಾಷಣಂ ಕುರ್ಮಃ । ವೃದ್ಧಾಃ ಸಂಸ್ಕೃತಂ ಅವಗಚ್ಛಂತಿ ಕಿಂತು ನ ಸಂಭಾಷಣಂ ಕುರ್ವಂತಿ । ಯುವಕಾಃ ಬಾಲಾಃ ಮಹಿಲಾಃ ಕರ್ಮಕರಾಃ ಕೃಷೀವಲಾಃ ಸರ್ವೇ ಸಂಸ್ಕೃತೇನ ಏವ ವದಾಮಃ (ಸ್ವಾಮಿ, ನಮ್ಮ ಗ್ರಾಮದಲ್ಲಿ ನೂರಕ್ಕೂ ಹೆಚ್ಚು ಮನೆಗಳಿವೆ, ಒಟ್ಟು 1,300ಕ್ಕೂ ಹೆಚ್ಚು ಜನರಿದ್ದೇವೆ. ನಾವೆಲ್ಲರೂ ಸಂಸ್ಕೃತ ಮಾತನಾಡಬಲ್ಲೆವು. ಇಲ್ಲಿ ನಮ್ಮ ಆಡುಭಾಷೆ ಮಾಲವಿ. ಆದರೀಗ ನಾವೆಲ್ಲರೂ ಸಂಸ್ಕೃತದಲ್ಲೇ ಮಾತನಾಡುತ್ತೇವೆ. ವೃದ್ಧರು ಕೆಲವರು ಮಾತ್ರ ಸಂಸ್ಕೃತವನ್ನು ಅರ್ಥೈಸಿಕೊಳ್ಳುತ್ತಾರೆ ಮಾತಾಡುವುದಿಲ್ಲ. ಆದರೆ ಯುವಕರು, ಮಕ್ಕಳು, ಮಹಿಳೆಯರು, ದಿನಗೂಲಿಯವರು, ಕೃಷಿಕರು, ಎಲ್ಲರೂ ಸಂಸ್ಕೃತದಲ್ಲಿ ಮಾತನಾಡುತ್ತೇವೆ)

"ಮೊದಲು ನಮ್ಮಲ್ಲಿನ ಜನರು ಧೂಮಪಾನ, ಮದ್ಯಪಾನದಂತಹ ದುಶ್ಚಟಗಳನ್ನು ಮೈಗೂಡಿಸಿಕೊಂಡಿದ್ದರು. ಅವುಗಳಿಗಾಗಿ ಸಾಲ ಮಾಡುವುದು, ಅದನ್ನು ತೀರಿಸಲಾಗದೆ ಒದ್ದಾಡುವುದು ನಡೆದೇ ಇತ್ತು. ಆದರೆ ಇಂದು ಝಿರಿಯ ಹಿರಿಯರು ದುಶ್ಚಟಗಳನ್ನು ತ್ಯಜಿಸಿದ್ದಾರೆ. ವಿಶೇಷವಾಗಿ ಮದ್ಯಪಾನದಂತಹ ದುಶ್ಚಟ ಊರಿಂದ ತೊಲಗಿದೆ. ಭಗವಂತನ ಆಶೀರ್ವಾದವೋ ಎಂಬಂತೆ ಸಂಸ್ಕೃತ ನಮ್ಮ ಊರನ್ನು ಪ್ರವೇಶಿಸಿತು. ಈಗ ಎಲ್ಲರೂ ಹೊಸ ಜೀವನವನ್ನು ಆರಂಭಿಸಿದ್ದಾರೆ. ಒಟ್ಟಿನಲ್ಲಿ ಸಂಸ್ಕೃತ ನಮ್ಮೆಲ್ಲರಿಗೂ ಹೊಸ ಬದುಕನ್ನು ನೀಡಿದೆ" ಎಂದು.



WRITING ON THE WALL: *Vadatu Sanskrit, mamah bhasha Sanskrit bhasha* (Speak Sanskrit; our language is Sanskrit) declares Jhiri

# ಗೋಹತ್ಯೆ ತಡೆಯಲು ಉಪ ಲೋಕಾ ಆದೇಶ

ಗೋವು, ಎಮ್ಮೆ, ಒಂಟೆ ಮತ್ತಿತರ ಪ್ರಾಣಿಗಳ ಅಕ್ರಮ ಸಾಗಣೆ ಹಾಗೂ ಕ್ರೂರ ಹತ್ಯೆ ತಡೆಯುವಂತೆ ಕರ್ನಾಟಕದ ಉಪ ಲೋಕಾಯುಕ್ತ ನ್ಯಾ. ಸುಭಾಷ್ ಬಿ. ಅಡಿ ಅವರು ರಾಜ್ಯದ ಎಲ್ಲ ಜಿಲ್ಲಾಡಳಿತಗಳಿಗೆ ಆದೇಶ ನೀಡಿದ್ದಾರೆ. ಜಿಲ್ಲಾಧಿಕಾರಿಗಳು ಮತ್ತು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿಗಳನ್ನೊಳಗೊಂಡ ಜಿಲ್ಲಾ ಮಟ್ಟದ ಸಮಿತಿಗಳನ್ನು ರಚಿಸಿ, ಸುಪ್ರೀಂಕೋರ್ಟ್ ನೀಡಿರುವ ತೀರ್ಪನ್ನು ಪಾಲಿಸಬೇಕು. ಹಸು, ಎಮ್ಮೆ, ಕರು, ಒಂಟೆ ಮತ್ತಿತರ ಪ್ರಾಣಿಗಳ ಅಕ್ರಮ ಸಾಗಣೆ ಹಾಗೂ ನಿಯಮ ಬಾಹಿರವಾಗಿ ಕಸಾಯಿಖಾನೆಗಳಲ್ಲಿ ವಧೆ ಮಾಡುವುದನ್ನು ನಿಲ್ಲಿಸಬೇಕು. ಕಾನೂನು ಉಲ್ಲಂಘಿಸುವವರ ವಿರುದ್ಧ ಕಟ್ಟುನಿಟ್ಟಿನ ಕ್ರಮ ಜರುಗಿಸಿ ಆ. 18ರೊಳಗೆ ವರದಿ ಸಲ್ಲಿಸಬೇಕೆಂದು ಉಪ ಲೋಕಾಯುಕ್ತರು ರಾಜ್ಯ ಪೊಲೀಸ್ ಮಹಾನಿರ್ದೇಶಕರಿಗೆ ಹಾಗೂ ನಗರ ಪೊಲೀಸ್ ಆಯುಕ್ತರಿಗೆ ನಿರ್ದೇಶನ ನೀಡಿದ್ದಾರೆ.

ಅಕ್ರಮ ಕಸಾಯಿಖಾನೆಗಳನ್ನು ತೆರೆದು ಅಲ್ಲಿ ನಿಯಮಬಾಹಿರವಾಗಿ ಪ್ರಾಣಿಗಳನ್ನು ಕ್ರೂರವಾಗಿ ಹತ್ಯೆ ಮಾಡುತ್ತಿರುವುದನ್ನು ತಡೆಗಟ್ಟಬೇಕೆಂದು ಪಶು ಸಂಗೋಪನ ಇಲಾಖೆ ಹಾಗೂ ವಿವಿಧ ಸ್ವಯಂಸೇವಾ ಸಂಸ್ಥೆಗಳು ದೂರು ನೀಡಿದ್ದವು. ಪ್ರಾಣಿಗಳ ಕ್ರೂರ ಹತ್ಯೆ ನಿಷೇಧಿಸಿ ಸುಪ್ರೀಂಕೋರ್ಟ್ ತೀರ್ಪ ನೀಡಿದ್ದು, ಅದನ್ನು ಕಡ್ಡಾಯವಾಗಿ ಪಾಲಿಸುವಂತೆ 2013ರಲ್ಲೇ ಎಲ್ಲ ರಾಜ್ಯಗಳಿಗೆ ನಿರ್ದೇಶನ ನೀಡಲಾಗಿದೆ. ಆದರೂ ರಾಜ್ಯದಲ್ಲಿ ನಿಯಮ ಪಾಲಿಸುತ್ತಿಲ್ಲ ಎಂದು ದೂರಿನಲ್ಲಿ ಉಲ್ಲೇಖಿಸಲಾಗಿದೆ.

# ಗೋವಾದಲ್ಲಿ ಕೃಷ್ಣನ ಕಾಲದ ಬಂದರು ಪತ್ತೆ

ಪಣಜಿಯ ಜುವಾರಿ ನದಿಯ ಬಳಿ ಪುರಾತನ ಬಂದರಿನ ಪಳೆಯುಳಿಕೆಯೊಂದನ್ನು ವಿಜ್ಞಾನಿಗಳು ಪತ್ತೆ ಮಾಡಿದ್ದಾರೆ. ಇದು ಗೋವಾದ ಮರ್ಮಗೋವಾ ಬಂದರಿಗಿಂತ ಹಳೆಯದ್ದಾಗಿದ್ದು, ಕೃಷ್ಣನ ಅವಧಿಯದ್ದಾಗಿರಬಹುದೆಂದು ಅಂದಾಜಿಸಿದ್ದಾರೆ. ಗೋವಾ ಮೂಲದ ರಾಷ್ಟ್ರೀಯ ಸಾಗರಶಾಸ್ತ್ರ ಸಂಸ್ಥೆಯ ಸಮುದ್ರಶಾಸ್ತ್ರಜ್ಞರು ಜುವಾರಿ ನದಿಯ ಉದ್ದಕ್ಕೂ ಕೈಗೊಂಡಿರುವ ಉತ್ಖನನ ಕಾರ್ಯದಲ್ಲಿ ನೀರಿನಲ್ಲಿ ಮುಳುಗಿರುವ ಮೆಟ್ಟಿಲುಗಳನ್ನು ಪತ್ತೆ ಮಾಡಿದ್ದಾರೆ. ಇದರ ಜಾಡು ಹಿಡಿದು ಮುಂದುವರಿದ ಅವರು, ನದಿಗೆ ಅಭಿಮುಖವಾಗಿ ದೊಡ್ಡ ಗೋಡೆ ಇರುವುದನ್ನು ಖಚಿತಪಡಿಸಿದ್ದಾರೆ. ಹೀಗಾಗಿ ಕ್ರಿ.ಪೂ. 1000–3000 ನಡುವೆ ನಿರ್ಮಾಣಗೊಂಡಿರಬಹುದಾದ 1.2 ಕಿ.ಮೀ. ಉದ್ದದ ಗೋಡೆಯ ಉತ್ಖನನ ಕಾರ್ಯ ಮುಂದುವರಿಸಿರುವುದಾಗಿ ವಿಜ್ಞಾನಿಗಳು ತಿಳಿಸಿದ್ದಾರೆ. ಈ ಹಿಂದೆ ಈ ಪ್ರದೇಶ ಗೋಪಕಾಪಟ್ಟಣಂ ಎಂದು ಕರೆಯಲ್ಪಡುತ್ತಿತ್ತು. ಇಲ್ಲಿ ಉತ್ಖನನ ಕಾರ್ಯ ನಡೆಸುವುದರಿಂದ ಗುಜರಾತ್‌ನಲ್ಲಿ ಭಾರತೀಯ ಪುರಾತತ್ವ ಇಲಾಖೆಯ ಉತ್ಖನನಕಾರರು 1954ರಲ್ಲಿ ಪತ್ತೆ ಮಾಡಿದ್ದ ಸುಮಾರು 4,500 ವರ್ಷ ಹಳೆಯದಾದ ಲೋಥಲ್ ಬಂದರಿನ ರೀತಿಯ ಬಂದರನ್ನು ಪತ್ತೆ ಮಾಡಲು ಸಾಧ್ಯವಿದೆ. ಹೀಗಾಗಿ ಈ ಭಾಗದಲ್ಲಿ ಮುಚ್ಚಿ ಹೋಗಿರಬಹುದಾದ ಕಟ್ಟಡಗಳನ್ನು ಪತ್ತೆಮಾಡಲು ಭೂಮಿಯನ್ನು ಹಾದುಹೋಗುವ ರೆಡಾರ್ ಸರ್ವೆ ಕೈಗೊಳ್ಳಲಾಗುವುದು ಎಂದು ರಾಷ್ಟ್ರೀಯ ಸಾಗರಶಾಸ್ತ್ರ ಸಂಸ್ಥೆಯ ಸಾಮುದ್ರಕ ಪುರಾತತ್ವ ವಿಭಾಗ ತಿಳಿಸಿದೆ.

ಸಂಪಾದಕ–ಪ್ರಕಾಶಕ : ಕಾ.ಶ್ರೀ. ನಾಗರಾಜ, # 74, ರಂಗರಾವ್ ರಸ್ತೆ, ಬೆಂಗಳೂರು–04.
ಮುದ್ರಕರು : ರಾಷ್ಟ್ರೋತ್ಥಾನ ಮುದ್ರಣಾಲಯ, ಬೆಂಗಳೂರು–19.
ಚಂದಾ ವಿವರ ಮತ್ತು ವಿಳಾಸ ಬದಲಾವಣೆಗಾಗಿ : 97391 83021
ಸಂಪಾದಕೀಯ : 9731264009